CC-O. In Public Domain. Digitized by eGangotri

520

# ನಾಗರಹೊಳೆ

ಎ. ಸಿ. ಲಕ್ಷ್ಮಣ

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

NAGARAHOLE – a monograph on the wild life sanctuary 'Nagarahole' written by A. C. Laxmana and Published by G. K. Ananthram for IBH Prakashana Gandhinagar, Bangalore–560 009.

ಬೆಲೆ : ರೂ. 3-00

© 1983 by the Publisher

ಚಿತ್ರಗಳು : ಬಿ. ಕೇಸರ್ ಸಿಂಗ್, ಕೆ. ಎನ್. ಎಸ್. ಅಯ್ಯರ್, ಲಿಂಗರಾಜ್, ಟಿ. ಎನ್. ಎ. ಪೆರುಮಾಳ್

ಎರಡನೆಯ ಮುದ್ರಣ : 1983. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಆನಂತರಾಮ್, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009 ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ಬೆಂಗಳೂರು 560 054.

Sri Vidyabharathi Book Centre, Sringeri

CC-O. In Public Domain. Digitized by eGangotri

# ನಾ ಗ ರ ಹೊ ಳೆ

## ಪೀ ಠಿ ಕೆ

ಮಾನವ ಮತ್ತು ಅರಣ್ಯಗಳ ನಡುವಿನ ಸಂಬಂಧ ಇಂದು–ನಿನ್ನೆಯದಲ್ಲ. ಹಲವಾರು ಸಾವಿರ ವರ್ಷಗಳಷ್ಟು ಹಿಂದಿನದು. ಅರಣ್ಯಗಳಲ್ಲಿನ ಅಸಂಖ್ಯಾತ ಕ್ರಿಮಿ–ಕೀಟ, ಪ್ರಾಣಿಪಕ್ಷಿಗಳು ಪುರಾತನ ಕಾಲದಿಂದ ಭೂಮಿಯ ಮೇಲೆ ಮಾನವನೊಡನೆ ಸಹಜೀವನ ನಡೆಸಿಕೊಂಡು ಬಂದಿವೆ.

ನಮ್ಮ ಪ್ರಾಚೀನ ಮಹಾಕಾವ್ಯಗಳಲ್ಲಿ ಅರಣ್ಯಗಳ ಮತ್ತು ವನ್ಯಪ್ರಾಣಿಗಳ ಬಗೆಗೆ ಭವ್ಯ, ಸುಂದರ, ರುದ್ರ ಹಾಗೂ ಭೀಕರ ವರ್ಣನೆಗಳನ್ನು ಹೇರಳವಾಗಿ ಕಾಣುತ್ತೇವೆ. ವೇದಗಳಲ್ಲಿ ಅರಣ್ಯಗಳ ಬಗೆಗೆ ಪ್ರಸ್ತಾಪಗಳಿವೆ. ಪಾಣಿನಿಯ ಸೂತ್ರಗಳಲ್ಲಿ ಅರಣ್ಯಗಳ ವರ್ಗೀಕರಣ ಪ್ರಾಮುಖ್ಯತೆಗಳ ವಿಷಯದಲ್ಲಿ ಮಾಹಿತಿಗಳಿವೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಂದಿನ ದಿನಗಳಲ್ಲಿ ಅರಣ್ಯಗಳಿಗೆ ಎಷ್ಟು ಮಹತ್ವ ಕೊಡಲಾಗಿತ್ತು ಎಂಬುದರ ಬಗೆಗೂ ಮತ್ತು ಕಾಡುಗಳ ನಾಶ ಮಾಡುವವರಿಗೆ ಎಂತಹ ಕಠಿಣ ಶಿಕ್ಷೆಗಳನ್ನು ನೀಡಲಾಗುತ್ತಿತ್ತು ಎಂಬುದನ್ನು ವಿವರವಾಗಿ ತಿಳಿಯುತ್ತೇವೆ.

ಕರ್ನಾಟಕದ ಅರಣ್ಯಗಳಿಗೆ ಉಜ್ವಲ ಇತಿಹಾಸವಿದೆ. ಇತಿಹಾಸದ ಆರಂಭದಿಂದಲೂ ಇಲ್ಲಿನ ಅರಣ್ಯಗಳು ಮತ್ತು ಅರಣ್ಯ ಸಂಪತ್ತುಗಳ ಉಪಯೋಗದ ಬಗ್ಗೆ ಮಾಹಿತಿ ದೊರೆಯುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri


ಮೆಣಸು, ಏಲಕ್ಕಿ, ಲವಂಗ ಮುಂತಾದ ಪದಾರ್ಥಗಳನ್ನು, ಶ್ರೀಗಂಧ, ಸುರಹೊನ್ನೆ, ತೇಗ, ಮುಂತಾದ ಬೆಲೆ ಬಾಳುವ ಮರಗಳನ್ನು ಕರ್ನಾಟಕದ ತೀರ ಪ್ರದೇಶಗಳಿಂದ ಸಮುದ್ರದ ಮೂಲಕ ಇತರ ದೇಶಗಳಿಗೆ ಹದಿನಾಲ್ಕನೆಯ ಶತಮಾನದವರೆಗೂ ಕಳಿಸಲಾಗುತ್ತಿತ್ತು. ಕರ್ನಾಟಕ ಮತ್ತು ಮಲಬಾರ್‌ಗಳಲ್ಲಿನ ಅರಣ್ಯ ಸಂಪತ್ತನ್ನು ಪ್ರಸಿದ್ಧ ವೆನಿಷಿಯನ್ ಯಾತ್ರಿಕ 1290ರಲ್ಲಿಯೇ ಪ್ರಶಂಸಿಸಿದ್ದಾನೆ. ವಿಜಯನಗರ ಸಾಮ್ರಾಜ್ಯಕ್ಕೆ 1444ರಲ್ಲಿ ಭೇಟಿ ನೀಡಿದ ಅಬ್ದುರ್–ರಜಾಕ್ ಎಂಬ ಯಾತ್ರಿಕನೂ ಇವುಗಳ ಬಗ್ಗೆ ತನ್ನ ಬರಹಗಳಲ್ಲಿ ಪ್ರಸ್ತಾಪಿಸಿದ್ದಾನೆ.

ಮೇಲ್ಕಾಣಿಸಿದ ವಿವರಗಳು ಅರಣ್ಯ ಸಂರಕ್ಷಣೆ ಕಾರ್ಯ ಪ್ರಾಚೀನ ಕಾಲದಿಂದ ಎಷ್ಟು ವ್ಯವಸ್ಥಿತವಾಗಿ ನಡೆದುಬಂದಿತ್ತು ಎಂಬುದನ್ನು ತಿಳಿಸುತ್ತದೆ. "ಅರಣ್ಯ ರಕ್ಷಣೆಗೆಂದೇ ಒಬ್ಬ ಅರಣ್ಯ ಸಂರಕ್ಷಣಾಧಿಕಾರಿ ಇರುತ್ತಿದ್ದನು. ಅವನನ್ನು 'ಕುಪಾಧ್ಯಕ್ಷ' ಎಂದು ಕರೆಯಲಾಗುತ್ತಿತ್ತು. ಅರಣ್ಯಗಳಿಂದ ಬರುವ ಆದಾಯವನ್ನು ಕುರಿತು ಅರಣ್ಯ ಸಂರಕ್ಷಣೆಗಳೇ ಅಲ್ಲದೆ, ಅರಣ್ಯಗಳ ಪ್ರಾಮುಖ್ಯತೆಯ ಬಗೆಗೂ ಜನತೆಗೆ ತಿಳುವಳಿಕೆ ನೀಡುವುದು ಅತನ ಕರ್ತವ್ಯವಾಗಿತ್ತು" ಎಂಬ ವಿಷಯಗಳನ್ನು ಕೌಟಿಲ್ಯನ ಅರ್ಥಶಾಸ್ತ್ರದಿಂದ ಅರಿಯಬಹುದು.

ಅರಣ್ಯಗಳ ಮೇಲ್ವಿಚಾರಣೆ, ರಕ್ಷಣೆ ಮತ್ತು ಪ್ರಾಮುಖ್ಯದ ವಿಷಯದಲ್ಲಿ ಕೌಟಿಲ್ಯನ ಕಾಲದಲ್ಲೇ ಜನರಿಗೆ ಹೆಚ್ಚು ತಿಳಿದಿದ್ದರೂ, ಚಕ್ರಾಧಿಪತ್ಯಗಳ ಬದಲಾವಣೆ, ಆಡಳಿತಗಳಲ್ಲಿನ ಅರಾಜಕತೆ ಮತ್ತು ಇನ್ನೂ ಅನೇಕ ಕಾರಣಗಳಿಂದ ರಾಷ್ಟ್ರದ ಬಹುಪಾಲು ಅರಣ್ಯಗಳು ನಾಶವಾಗಬೇಕಾಯಿತು. ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ 1565ರಲ್ಲಿ ಪತನವಾದ ನಂತರ ದಕ್ಷ ರೀತಿಯಲ್ಲಿ ನಡೆದುಕೊಂಡು ಬರುತ್ತಿದ್ದ ಅರಣ್ಯ ಸಂರಕ್ಷಣೆ

Sri Bhuvaneshwari Book Centre, Sringeri

CC-O. In Public Domain. Digitized by eGangotri


ಕಾರ್ಯ ಕುಂಠಿತಗೊಂಡು ಅರಣ್ಯಗಳ ಲೂಟಿ ಹೇರಳವಾಗಿ ನಡೆದು, ಬೆಲೆಬಾಳುವ ಶ್ರೀಗಂಧ ಅಕ್ರಮ ಕಡಿತಲೆಯಾಗಿ ಮಾರಾಟವಾಯಿತು. ಮೈಸೂರು ಸಂಸ್ಥಾನದ ಆಡಳಿತ ಹೈದ ರಾಲಿ–ಟಿಪ್ಪು ಅವರ ಕೈಗೆ ಬರುವಷ್ಟರಲ್ಲಿ ಅರಣ್ಯಗಳ ರಕ್ಷಣೆಯ ಪ್ರಾಮುಖ್ಯತೆ ಅರಿವಿಗೆ ಬಂದಿತು. ತೇಗ ಮುಂತಾದ ಮರ ಗಳನ್ನು ಹಡಗುಗಳನ್ನು ಕಟ್ಟಲೂ, ಶ್ರೀಗಂಧವನ್ನು ಹೊರದೇಶ ಗಳಿಗೆ ಕಳಿಸಲೂ ವ್ಯವಸ್ಥಿತ ಏರ್ಪಾಡುಗಳಾದವು. ಶ್ರೀಗಂಧ ಮತ್ತು ತೇಗದ ಮರಗಳನ್ನು 'ರಾಜವೃಕ್ಷ'ಗಳೆಂದು ಘೋಷಿಸ ಲಾಯಿತು. ರಾಷ್ಟ್ರದಲ್ಲಿ ಬ್ರಿಟಿಷ್‌ರ ಆಗಮನದ ನಂತರ, 1799 ರಲ್ಲಿ ಕರ್ನಾಟಕದ ಆಡಳಿತ ಅವರ ಕೈವಶವಾಯಿತು. ಪ್ರಾರಂಭ ದಲ್ಲಿ ಕೆಲವು ಬ್ರಿಟಿಷ್ ಅಧಿಕಾರಿಗಳು ನಮ್ಮ ಅರಣ್ಯಗಳ ಮೇಲೆ ಶ್ರದ್ಧೆ ಆಸಕ್ತಿಗಳನ್ನು ತೋರಿದರೂ ಅವುಗಳು ಬರೀ ತೇಗ, ಶ್ರೀಗಂಧಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಲಾರ್ಡ್ ಡಾಲ್‌ಹೌಸಿ ಮತ್ತು ಅವನ ನಂತರ ಬಂದ ಕೆಲವು ಬ್ರಿಟಿಷ್ ಅಧಿ ಕಾರಿಗಳು ಈ ಬಗ್ಗೆ ಅಧ್ಯಯನ ನಡೆಸಿ, ಅರಣ್ಯಗಳ ಪ್ರಾಮುಖ್ಯ ವನ್ನು ಅರಿತು, ದೇಶದ ಅರಣ್ಯ ಸಂಪತ್ತನ್ನು ರಕ್ಷಿಸಲು ಹೆಚ್ಚು ಗಮನಾರ್ಹ ಕೆಲಸ ಮಾಡಿದರು. ಆಡಳಿತಗಾರರ ಸಹಕಾರದಿಂದ ಎಲ್ಲಾ ದೇಶೀಯ ಸಂಸ್ಥಾನಗಳಲ್ಲೂ ಅರಣ್ಯ ಇಲಾಖೆಗಳನ್ನು ಸ್ಥಾಪಿಸಿ ಅರಣ್ಯ ರಕ್ಷಣೆಗೆ ಹೆಚ್ಚು ಗಮನ ನೀಡಿದರು.

## ಅರಣ್ಯ ಇಲಾಖೆ

ಹಿಂದಿನ ಮೈಸೂರು ಸಂಸ್ಥಾನದಲ್ಲಿ, 1864ರಲ್ಲಿ ಪ್ರಥಮ ವಾಗಿ ಅರಣ್ಯ ಇಲಾಖೆ ಸ್ಥಾಪಿತವಾಯಿತು. ಅರಣ್ಯಗಳ ದುರುಪ ಯೋಗ ಮತ್ತು ನಿರ್ಮೂಲನಗಳೇ ಹೆಚ್ಚಾಗಿದ್ದುದನ್ನು ಗಮನಿ ಸಿದ ಅಂದಿನ ಸರ್ಕಾರ, ಅರಣ್ಯ ಸಂರಕ್ಷಣೆಗಾಗಿ ಮೇಜರ್ ಹಂಟರ್

Sri Vidyabharathi Book Centre, Sringeri

CC-O. In Public Domain. Digitized by eGangotri


ಎಂಬುವವರನ್ನು ಅರಣ್ಯ ಸಂರಕ್ಷಕರನ್ನಾಗಿ ನೇಮಿಸಿ ಅವರ ಸಹಾಯಕರಾಗಿ ಲೆಫ್ಟಿನೆಂಟ್ ಸೋಮರ್ನ್ ಮತ್ತು ಮಿಲ್ಲರ್ ಎಂಬುವರ ಸೇವೆಗಳನ್ನು ನೀಡಿತು.

ಸೋಮರ್ನ್ ಅವರು ಕೊಡಗು ರಾಜ್ಯದ ಅರಣ್ಯಗಳ ಮೇಲ್ವಿಚಾರಣೆಯನ್ನು ನೋಡಿಕೊಂಡರು. ಇವರೆಲ್ಲರೂ ಸೇರಿ ಅರಣ್ಯ ಇಲಾಖೆಗೆ ಸಂಬಂಧಿಸಿದ ಕೆಲವು ಕಾಯಿದೆ ನಿಯಮಗಳನ್ನು ರಚಿಸಿದರು. ಅರಣ್ಯ ಪ್ರದೇಶಗಳ ಕಾಯ್ದಿಡುವಿಕೆ, ಕಾಳ್ಗಿಚ್ಚುಗಳನ್ನು ತಡೆಯುವಿಕೆ, ಅರಣ್ಯೋತ್ಪನ್ನಗಳನ್ನು ಹಾಳುಮಾಡದೆ ಸರಿಯಾಗಿ ಉಪಯೋಗ ಮಾಡಿಕೊಳ್ಳುವಿಕೆ ಮುಂತಾದವುಗಳ ಕಡೆಗೆ ಗಮನ ನೀಡಿದರು. ಮೈಸೂರು ಸಂಸ್ಥಾನದ ಕೆಲವೆಡೆಗಳಲ್ಲಿ ವ್ಯಾಪಕ ಅರಣ್ಯ ನಿರ್ಮೂಲನ ನಡೆಯುತ್ತಿದ್ದುದನ್ನು ಗಮನಿಸಿದ ಅಂದಿನ ಆಡಳಿತಗಾರರು 1867ರಲ್ಲಿ ಅರಣ್ಯಸಂಪತ್ತಿನ ಸಂರಕ್ಷಣೆಗೆ ಇದ್ದ ಕಾಯಿದೆಗಳನ್ನು ಬಿಗಿಮಾಡಿದರು. ಅನೇಕ ಅರಣ್ಯ ಪ್ರದೇಶಗಳನ್ನು ಪರೀಕ್ಷಿಸಿ ಕೆಲವನ್ನು 'ಕಾಯ್ದಿರಿಸಿದ ಅರಣ್ಯ ಪ್ರದೇಶ'ಗಳೆಂದು ಘೋಷಿಸಿದರು. ಈ ಪ್ರದೇಶಗಳಲ್ಲಿ ಸರ್ಕಾರದ ಅನುಮತಿಯಿಲ್ಲದೆ ಇತರರು ಮರ ಕಡಿಯುವುದನ್ನು ನಿಷೇಧಿಸಲಾಯಿತು. 1868ರಲ್ಲಿ ಕೊಡಗು ಪ್ರದೇಶದಲ್ಲಿನ ತೇಗದ ತೋಟಗಳನ್ನು ಬೆಳೆಸಲು, ಪಶ್ಚಿಮ ಘಟ್ಟಗಳ ಇತರ ಕೆಲವು ಪ್ರದೇಶಗಳಲ್ಲಿಯೂ ಕೂಡ ಬೆಲೆಬಾಳುವ ಮರಗಳನ್ನು ಬೆಳೆಸಲು ಪ್ರೋತ್ಸಾಹಿಸಲಾಯಿತು.

1831ರಿಂದ ಬ್ರಿಟಿಷರ ಅಧೀನದಲ್ಲಿದ್ದ ಮೈಸೂರನ್ನು 1881ರಲ್ಲಿ ಮಹಾರಾಜರಿಗೆ ಬಿಟ್ಟುಕೊಡಲಾಯಿತು. ಮಹಾರಾಜರ ಕಾಲದಲ್ಲಿ ಅರಣ್ಯ ಇಲಾಖೆ ಬಲಗೊಂಡು ಕೆಲವೇ ವರ್ಷಗಳಲ್ಲಿ ಅಭಿವೃದ್ಧಿ ಹೊಂದಿತು. ರಾಜಕಾರ್ಯ ಪ್ರಸಕ್ತ ಶ್ರೀ ಎಂ. ಮುತ್ತಣ್ಣ, ಶ್ರೀ ಎಂ.ಜಿ. ರಾಮಯ್ಯ, ಶ್ರೀ ಬಿ.ವಿ. ರಾಮು

Sri Vidyabharathi Book Centre, Sringeri

CC-O. In Public Domain. Digitized by eGangotri



ಅಯ್ಯಂಗಾರ್ ಹಾಗೂ ಶ್ರೀ ಮಾಚಯ್ಯನವರು ಮೈಸೂರು ಸಂಸ್ಥಾನದ ಮುಖ್ಯ ಅರಣ್ಯ–ಸಂರಕ್ಷಣಾಧಿಕಾರಿಗಳಾಗಿದ್ದ ಕಾಲದಲ್ಲಿ ಅರಣ್ಯಗಳ ಅಭಿವೃದ್ಧಿ ಮತ್ತು ವೈಜ್ಞಾನಿಕವಾಗಿ ಅವುಗಳ ಉಪಯೋಗ ಪಡೆದುಕೊಳ್ಳುವುದು ಮುಂತಾದ ಕಾರ್ಯಕ್ರಮಗಳಿಗೆ ಆದ್ಯತೆ ದೊರೆಯಿತು.

ನಮ್ಮ ರಾಜ್ಯದ ಆರ್ಥಿಕ ಭದ್ರತೆಯಲ್ಲಿ ಅರಣ್ಯಗಳ ಪಾತ್ರ ಹಿರಿದಾಗಿದೆ. ಅರಣ್ಯ ಇಲಾಖೆ ಸ್ಥಾಪಿತವಾಗಿ 116 ವರ್ಷಗಳು ಸಂದಿವೆ. ಪ್ರತಿಯೊಂದು ಕ್ಷೇತ್ರದ ಬೆಳವಣಿಗೆಗೆ ಅರಣ್ಯಗಳ ಬಳಕೆ ಸತತವಾಗಿ ನಡೆದುಬಂದಿದೆ.

## ಅರಣ್ಯ ಸಂರಕ್ಷಣೆ

ಇತ್ತೀಚೆಗಂತೂ ಅರಣ್ಯಗಳ ನಿರ್ಮೂಲನಾಕಾರ್ಯ, ಕೆಲವರ ಪ್ರಮುಖ ವ್ಯಾಪಾರವಾಗಿ ಪರಿಣಮಿಸಿದೆ. ಇದಕ್ಕೆ ಹಿನ್ನೆಲೆ ಏನೇ ಇದ್ದರೂ, ಅವರ ಪ್ರಕೃತಿ ವಿಜ್ಞಾನ ಮೌಢ್ಯ, ಅರಣ್ಯ ಪ್ರಾಮುಖ್ಯತೆ ಬಗ್ಗೆ ತಿಳುವಳಿಕೆ ಇಲ್ಲದಿರುವುದು, ರಾಜ್ಯದ ಹಿತಾಸಕ್ತಿಯ ಬಗೆಗೆ ಅವರಿಗೆ ದೂರದೃಷ್ಟಿ ಇಲ್ಲದಿರುವುದನ್ನು ಎತ್ತಿ ತೋರಿಸುತ್ತದೆ.

ಕಾಡುಗಳು ಹಾಗೂ ವನ್ಯಮೃಗಗಳು ನಿಸರ್ಗವಿತ್ತ ಕಾಣಿಕೆಗಳು. ಮನುಷ್ಯ ಸುಗಮವಾಗಿ ಆರೋಗ್ಯದಿಂದ ಜೀವಿಸಲು ಇವೆರಡರ ಸಂರಕ್ಷಣೆ ಅತ್ಯಗತ್ಯ. ಅವುಗಳೊಡನೆ ಪುರಾತನ ಕಾಲದಿಂದ ಸಹಜೀವನ ನಡೆಸಿಕೊಂಡು ಬಂದ ಮಾನವ, ಇಂದಿನ ದಿನಗಳಲ್ಲಿ ಅವುಗಳಿಂದ ಬೇರ್ಪಡಿಸಿಕೊಳ್ಳಲು ಯತ್ನಿಸಿದ್ದೇ ಆದರೆ ತನ್ನ ವಿನಾಶವನ್ನು ತಾನೇ ಮಾಡಿಕೊಂಡಂತೆ. ನಿಸರ್ಗದ ಸಮತೋಲನ ಕಾಪಾಡಿಕೊಂಡು ಬರುವಲ್ಲಿ ಕಾಡಿನ ಪ್ರತಿಯೊಂದು ಪ್ರಾಣಿಯೂ ತನ್ನದೇ ಆದ ಪಾತ್ರವನ್ನು ನಿರ್ವಹಿಸಿಕೊಂಡಿರುತ್ತಾ ಸಹಾಯ ಮಾಡುತ್ತಿದೆ.

CC-O. Jayalalithaa Academy of Fine Arts Collection. Digitized by eGangotri

CC-O. In Public Domain. Digitized by eGangotri



ಆದ್ದರಿಂದ ಕಾಡಿನಲ್ಲಿಯ ಪ್ರತಿಯೊಂದು ಪ್ರಾಣಿಯ ರಕ್ಷಣೆ ಮಾನವನ ಗುರುತರ ಜವಾಬ್ದಾರಿ.

ಕಾಡು ವನ್ಯಪ್ರಾಣಿಗಳಿಗೆಂದೇ ಪ್ರಕೃತಿ ದಯಪಾಲಿಸಿದ ಬೀಡು. ವನ್ಯಪ್ರಾಣಿಗಳು ರಾಷ್ಟ್ರದ ಅಮೂಲ್ಯ ಸೊತ್ತುಗಳು. ಹೆಚ್ಚುತ್ತಿರುವ ಜನಸಂಖ್ಯೆ ಪಟ್ಟಣಗಳ ವಿಸ್ತಾರಕ್ಕೆ ಎಡೆಮಾಡಿಕೊಟ್ಟಿದೆ. ನೀರಾವರಿ – ಜಲವಿದ್ಯುತ್ ಯೋಜನಾಭಿವೃದ್ಧಿ ಕಾರ್ಯಾಚರಣೆ, ನಿರಾಶ್ರಿತರ ಪುನರ್ವಸತಿ, ಅರಣ್ಯೋತ್ಪನ್ನಗಳು ಹಾಗೂ ವ್ಯವಸಾಯ ಯೋಗ್ಯ ಭೂಮಿಗಳಿಗೆ ಹೆಚ್ಚುತ್ತಿರುವ ಬೇಡಿಕೆಗಳು ಕಾಡುಗಳನ್ನು ನಾಡಾಗಿಸಿವೆ, ಅರಣ್ಯಗಳನ್ನು ಮೈದಾನ ಪ್ರದೇಶಗಳನ್ನಾಗಿಸಿವೆ. ಬೃಹತ್ ಪ್ರಮಾಣದಲ್ಲಿನ ಕಾಡುಕಡಿಯುವಿಕೆ ವಿವಿಧ ಸುಂದರ ವನ್ಯಮೃಗಗಳ ನಿರ್ಭಯ ಜೀವನಕ್ಕೆ ಆತಂಕ ತಂದೊಡ್ಡಿದೆ. ಅಕ್ರಮ ಬೇಟೆಗಳು ಅವುಗಳ ಸಂಖ್ಯೆಯನ್ನು ಕುಗ್ಗಿಸುತ್ತಿವೆ. ಈ ರೀತಿ ವನ್ಯಪ್ರಾಣಿಗಳು ಮತ್ತು ಅವುಗಳಿಗೆ ಅತ್ಯಾವಶ್ಯಕವಾದ ಕಾಡುಗಳ ಮೇಲೆ ಆಗಬಹುದಾದ ಅನಗತ್ಯ ಒತ್ತಡವನ್ನು ತಪ್ಪಿಸಲು ಸರ್ವಪ್ರಯತ್ನ ನಡೆಸಬೇಕು. ಜಗತ್ತಿನಲ್ಲಿ ಮಾನವ ನಿರ್ಮಿತ ಸಂಪತ್ತಿಗಿಂತ ದೇವದತ್ತವಾದ ವನ್ಯಮೃಗ ಸಂಪತ್ತಿನ ಸಂರಕ್ಷಣೆ ಬುದ್ಧಿವಂತರೆಂದು ಹೇಳಿಕೊಳ್ಳುವ ಮಾನವರ ಹೊಣೆ.

ಈ ಗುರುತರವಾದ ಹೊಣೆಯನ್ನು ಗಮನದಲ್ಲಿರಿಸಿಕೊಂಡು ಕೇಂದ್ರ ಸರ್ಕಾರ 1972 ರಲ್ಲಿ ವನ್ಯಜೀವಿ ಸಂರಕ್ಷಣೆ ಕಾಯಿದೆಯೊಂದನ್ನು ಜಾರಿಗೆ ತಂದಿದೆ. ಭಾರತದಲ್ಲಿನ ಪ್ರಾಣಿಸಂಪತ್ತನ್ನು ರಕ್ಷಿಸಿ ಉಳಿಸಿಕೊಂಡು ಬರುವಲ್ಲಿ, ಈ ಕಾರ್ಯ ಮಹತ್ವದ ಮತ್ತು ದಿಟ್ಟತನದ ಮುನ್ನಡೆಯೆನಿಸಿದೆ. ಈ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಪ್ರತಿಯೊಂದು ರಾಜ್ಯದಲ್ಲೂ ಕ್ರಮ ಕೈಗೊಳ್ಳಲಾಗಿದೆ. ವನ್ಯಪ್ರಾಣಿಗಳ ಸಂರಕ್ಷಣೆ, ಅವುಗಳ ಸಂತತಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಅಭಿವೃದ್ಧಿ ಯೋಜನೆಗಳನ್ನು ಕಾರ್ಯಾಚರಣೆಗೆ ತರುವುದು, ವನ್ಯ ಮೃಗಗಳ ಪಥೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದು, ಮೇಲಿನ ಕಾಯಿದೆಯ ಕಾನೂನಿನ ಕಾರ್ಯಕ್ರಮಗಳಲ್ಲಿ ಸೇರಿವೆ.

1927ರಲ್ಲಿನ ಭಾರತೀಯ ಅರಣ್ಯ ಕಾಯಿದೆಯನ್ನು ಅನುಸರಿಸಿ ಮೈಸೂರು ಅರಣ್ಯ ಕಾಯಿದೆಯನ್ನೂ, ಕೊಡಗು ರಾಜ್ಯದ ಕಾಯಿದೆಯನ್ನೂ ರೂಪಿಸಲಾಯಿತು. 1956ರಲ್ಲಿ ರಾಜ್ಯ ಪುನರ್ವಿಂಗಡಣೆ ಕಾರ್ಯದ ಅಂಗವಾಗಿ ವಿಶಾಲ ಕರ್ನಾಟಕ ರೂಪು ಗೊಂಡ ನಂತರ 1964ರಲ್ಲಿ ಕರ್ನಾಟಕ ಅರಣ್ಯ ಕಾಯಿದೆಯನ್ನು ಪುನರ್‌ರೂಪಿಸಿ ಜಾರಿಗೆ ತರಲಾಗಿದೆ.

ಇದೇ ರೀತಿ 1972ರ ಭಾರತೀಯ ವನ್ಯಮೃಗಗಳ ಸಂರಕ್ಷಣಾ ಕಾಯಿದೆಯನ್ನನುಸರಿಸಿ, ಮೈಸೂರು ವನ್ಯಮೃಗಗಳ ಸಂರಕ್ಷಣಾ ಕಾಯಿದೆಯನ್ನೂ ಜಾರಿಗೆ ತರಲಾಯಿತು.

## ಅಭಯಾರಣ್ಯಗಳು

ಪ್ರಾಚೀನ ಕಾಲದ ಋಷ್ಯಾಶ್ರಮಗಳು ವನ್ಯಜೀವಿಗಳಿಗೆ ಅಭಯಾರಣ್ಯಗಳಾಗಿದ್ದವು. ಇಂಥ ಅರಣ್ಯಗಳಲ್ಲಿ ಮೃಗಪಕ್ಷಿಗಳನ್ನು ಕೊಲ್ಲುವುದು ಅಪರಾಧವೆಂದು ಪರಿಗಣಿಸಲಾಗುತ್ತಿತ್ತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವನ್ಯಪ್ರಾಣಿಗಳು ಯಾರ ಭಯವೂ ಇಲ್ಲದೆ ತಿರುಗಾಡುತ್ತಿದ್ದವೆಂಬುದನ್ನು ಉಲ್ಲೇಖಿಸಲಾಗಿದೆ. ಪಂಚತಂತ್ರ, ಹಿತೋಪದೇಶಗಳ ಕಥೆಗಳಲ್ಲಿ ನಮ್ಮ ಪೂರ್ವಿಕರು ಪ್ರಾಣಿಗಳ ನಡವಳಿಕೆಗಳನ್ನು ಅಧ್ಯಯನ ಮಾಡಿ ಅದನ್ನು ಮಾನವನ ಬುದ್ಧಿ ವಿಕಾಸಕ್ಕಾಗಿ ಅವುಗಳಲ್ಲಿ ಮಾನವ ಸ್ವಭಾವಗಳನ್ನು ಆರೋಪಿಸಿ ಕಥೆಗಳ ರೂಪದಲ್ಲಿ ನಿರೂಪಿಸಿರುವುದು ಮಾನವನ ಜೀವನದಲ್ಲಿ ಪ್ರಾಣಿಗಳ ಸಖ್ಯ ಎಷ್ಟಿತ್ತೆಂಬುದನ್ನು ಎತ್ತಿ ತೋರಿಸುತ್ತದೆ.

ಅಶೋಕ ಚಕ್ರವರ್ತಿಯ ಕಾಲದಲ್ಲಿ ಸಲಹುತ್ತಿದ್ದ ಪ್ರಾಣಿ

Sri Vidyabharathi Book Centre, Sringeri

CC-O. In Public Domain. Digitized by eGangotri



ವನ್ಯಸೌಂದರ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri



ಪಕ್ಷಿಗಳ ಸಂರಕ್ಷಣೆಗಾಗಿ ವಿಶೇಷವಾಗಿ ಕಾಯಿದೆಯೊಂದನ್ನು ಹೊರಡಿಸಿದ ಘಟನೆ ಪ್ರಪಂಚದಲ್ಲೇ ವನ್ಯಜೀವಿಗಳ ಸಂರಕ್ಷಣೆಯ ಪ್ರಥಮ ಕಾಯಿದೆ ಎಂದು ಹೇಳಬಹುದು.

ಕರ್ನಾಟಕದ ವಿಪುಲ ನೈಸರ್ಗಿಕ ವನ್ಯಸಂಪತ್ತನ್ನು ಉಳಿಸಿ ಬೆಳೆಸಲು ಮತ್ತು ಜನತೆ ಸುಂದರ ವನ್ಯಮೃಗಗಳನ್ನು ನೋಡಿ ನಲಿಯಲು, ರಾಜ್ಯದಲ್ಲಿ ಅನೇಕ ಅಭಯಾರಣ್ಯಗಳು, ರಾಷ್ಟ್ರೀಯ ವನ್ಯಪ್ರಾಣಿಕ್ಷೇತ್ರ ಮತ್ತು ಪಕ್ಷಿಧಾಮಗಳನ್ನು ಸ್ಥಾಪಿಸಲಾಗಿದೆ. ಅಭಯಾರಣ್ಯಗಳನ್ನು ಬಂಡಿಪುರ, ನಾಗರಹೊಳೆ, ಜಾಗರಕೊಳ್ಳಿ, ದಾಂಡೇಲಿ, ಅರಬ್ಬಿತಿಟ್ಟು, ಬಿಳಿಗಿರಿ ರಂಗನ ಬೆಟ್ಟ, ನುಗು, ಭದ್ರಾ ಮತ್ತು ತುಂಗಭದ್ರಾ, ಬ್ರಹ್ಮಗಿರಿ, ಸೋಮೇಶ್ವರ, ಬನ್ನೇರು ಘಟ್ಟ, ಶರಾವತಿ, ಮೂಕಾಂಬಿಕಾ, ಶೆಟ್ಟಿಹಳ್ಳಿ, ರಾಣೆಬೆನ್ನೂರು, ಮೇಲುಕೋಟೆ ಮತ್ತು ಚಿಂಜೋಳಿಗಳಲ್ಲೂ, ಪಕ್ಷಿಧಾಮಗಳನ್ನು ರಂಗನತಿಟ್ಟು, ಘಟಪ್ರಭಾಗಳಲ್ಲೂ ಸ್ಥಾಪಿಸಲಾಗಿದೆ.

ವನ್ಯಮೃಗಗಳ ಸಂರಕ್ಷಣಾ ಕಾರ್ಯಕ್ರಮಗಳ ಅಂಗವಾಗಿ, ಕರ್ನಾಟಕದಲ್ಲಿ ಅಭಯಾರಣ್ಯಗಳನ್ನು ಸ್ಥಾಪಿಸಲಾಗಿದೆ. ವಿವಿಧ ವನ್ಯಮೃಗಪಕ್ಷಿಗಳನ್ನು ಅವುಗಳ ನೈಸರ್ಗಿಕ ತವರು ಕಾಡುಗಳಲ್ಲಿ ಜನತೆ ನೋಡುವಂತಾಗಲು ವನ್ಯಮೃಗಧಾಮಗಳು ಸ್ಥಾಪಿತವಾಗುತ್ತಿವೆ. ಇದರಿಂದ ಜನತೆ ತಮ್ಮ ರಾಜ್ಯದ ವಿವಿಧ ನೈಸರ್ಗಿಕ ಸಸ್ಯ ಹಾಗೂ ಪ್ರಾಣಿಜೀವಿಗಳನ್ನು ಸಂರಕ್ಷಿಸಿ ಪೋಷಿಸುವಲ್ಲಿ ಸಾಕಷ್ಟು ನೆರವಾಗಲು ಸಾಧ್ಯವಾಗುವುದು. ಕರ್ನಾಟಕದಲ್ಲಿ ಈ ಉದ್ದೇಶದಿಂದ ಇಪ್ಪತ್ತು ವನ್ಯಮೃಗಧಾಮವನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ ಒಂದಾದ ನಾಗರಹೊಳೆ ಅಭಯಾರಣ್ಯ, ಪ್ರಮುಖ ವನ್ಯಮೃಗಗಳ ಅಭಯಧಾಮವೆನಿಸಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

# ನಾಗರಹೊಳೆ

ನಿಸರ್ಗಸಿರಿ ಕೊಡಗು ಜಿಲ್ಲೆಗೆ ಕಳಶಪ್ರಾಯವೆನಿಸಿದೆ, "ನಾಗರಹೊಳೆ ಅಭಯಾರಣ್ಯ." 1956 ವಿಶಾಲ ಕರ್ನಾಟಕಕ್ಕೆ ತನ್ನ ಸೇರ್ಪಡೆಯನ್ನು ಎತ್ತಿ ತೋರಿಸುವಂತೆ, ಕೊಡಗಿನ ಈ ಅಭಯಾರಣ್ಯ, ಸೊಬಗಿನ ಮೈಸೂರು ಜಿಲ್ಲೆಯ ಎಲ್ಲೆಯನ್ನು ಸೇರಿಕೊಂಡಿದೆ. ಕೊಡಗಿನ ತಿತ್ತಿಮತ್ತಿಯಿಂದ, ಮೈಸೂರು ಜಿಲ್ಲೆಯ ಕಾರಾಪುರ–ಕಾಕನಕೋಟೆಗಳವರೆಗೆ ವಿಶಾಲವಾಗಿ ಹಬ್ಬಿದೆ ನಾಗರಹೊಳೆಯ ವಿಸ್ತೀರ್ಣ.

ಈ ಅಭಯಾರಣ್ಯದಲ್ಲಿ, ನಾಗರಹಾವಿನ ಹಾಗೆ ಸುತ್ತಿ–ಸುತ್ತಿ ಹರಿಯುವ ಕಿರುತೊರೆಯೊಂದಿದೆ. ಇದರ ಹೆಸರು ನಾಗರ ಹೊಳೆ. ಆದುದರಿಂದಲೇ ಈ ಅಭಯಾರಣ್ಯಕ್ಕೆ ನಾಗರಹೊಳೆ ಎಂದೇ ಹೆಸರು. ಮಳೆಗಾಲದಲ್ಲಿ ನಾಲ್ಕರಿಂದ ಆರು ಅಡಿ ಎತ್ತರದ ವರೆಗೆ ಉಕ್ಕಿ ಹರಿವ ನಾಗರಹೊಳೆ, ಬೇಸಗೆಯಲ್ಲಿ ನಾಲ್ಕರಿಂದ ಐದು ಇಂಚುಗಳಿಗೆ ಇಂಗಿ ಕಿರುತೊರೆಯಾಗಿ ಹರಿಯುವುದು. ನಲ್ಕೇರಿ ಅರಣ್ಯದಲ್ಲಿ ಉಗಮಿಸುವ ನಾಗರಹೊಳೆ ಅಭಯಾರಣ್ಯದ ಮೂಲಕ ಹರಿದು ಮುಂದೆ ತಾರಕಾ ನದಿಯೊಡಗೂಡಿ ಕಪಿಲಾ ನದಿಯನ್ನು ಸೇರುತ್ತದೆ. ಇದರ ಜೊತೆಗೆ ಅಭಯಾರಣ್ಯದಲ್ಲಿ ಹಾದು ಹೋಗುವ ಮತ್ತೊಂದು ನದಿಯೆಂದರೆ ಲಕ್ಷ್ಮಣತೀರ್ಥ. ಪಶ್ಚಿಮ ಘಟ್ಟದ ಬ್ರಹ್ಮಗಿರಿಯಲ್ಲಿ ಹುಟ್ಟುವ ಈ ನದಿ ಕೊಡಗಿನ ನಿಸರ್ಗಸಿರಿಯ ಮಧ್ಯೆ ಹರಿದು, ಹುಣಸೂರು ಮುಖಾಂತರ ಸಾಗಿ, 'ನಾಗರಕಟ್ಟೆ' ಎಂಬಲ್ಲಿ ಕಾವೇರಿಯೊಡನೆ ಸೇರುತ್ತದೆ. ಕೇರಳದ ವೈನಾಡು ಅರಣ್ಯದ ಪಶ್ಚಿಮ ಘಟ್ಟದಲ್ಲಿ ಹುಟ್ಟಿ, ಕಾಕನಕೋಟೆ ಅರಣ್ಯದ ಮೂಲಕ ಹರಿದುಬರುವ ಇನ್ನೊಂದು ನದಿ ಕಪಿಲಾ ಇದರ ಎಡದಂಡೆಯಲ್ಲಿ ವಿಶ್ವವಿಖ್ಯಾತಿ ಪಡೆದ

Sri Vidyabharathi Book Centre, Sringeri

CC-O. In Public Domain. Digitized by eGangotri



"ಖೆಡ್ಡಾ" ಕಾರ್ಯಕ್ರಮ ನಡೆಸಲ್ಪಡುತ್ತಿತ್ತು. ಈಗ ಈ ಪ್ರದೇಶ ಕಪಿಲಾ ನೀರಾವರಿ ಯೋಜನೆಯಿಂದ ನೀರಿನಲ್ಲಿ ಮುಳಗಡೆಯಾಗಿದೆ.

ಕೊಡಗಿನ ಎಲ್ಲೆಯಲ್ಲಿರುವ ನಾಗರಹೊಳೆ ಅರಣ್ಯ ಹಾಗೂ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿನ ಕಾಕನಕೋಟೆ, ಕಾರಾಪುರ ಅರಣ್ಯಗಳು ಹಿಂದೆ ನಿರ್ಜನ ಹಾಗೂ ದುರ್ಗಮ ಪ್ರದೇಶಗಳಾಗಿದ್ದು ವಿವಿಧ ವನ್ಯಮೃಗಗಳು ನಿರ್ಭಯ ಜೀವನ ನಡೆಸುತ್ತಿದ್ದವು. ಕಾಲ ಗತಿಸಿದಂತೆ ಅರಣ್ಯ ಪ್ರದೇಶ ಕುಗ್ಗುತ್ತಾ ಬಂದು, ದುರ್ಗಮವಾಗಿದ್ದ ಅಂದಿನ ಅರಣ್ಯ ಇಂದು ಎಲ್ಲರೂ ಸುಗಮವಾಗಿ ಅಡ್ಡಾಡುವ ಪ್ರದೇಶವಾಗಿದೆ. ಅಪರೂಪದ ವನ್ಯಪ್ರಾಣಿಗಳು ನಶಿಸುತ್ತಾ ಬಂದಿವೆ. ಅಪರೂಪದ ವನ್ಯಪ್ರಾಣಿಗಳ ಸಂತತಿಯನ್ನು ರಕ್ಷಿಸಿ, ಅವುಗಳು ಸ್ವೇಚ್ಛೆಯಿಂದ ಕಾಡುಗಳಲ್ಲಿ ವಿಹರಿಸಿಕೊಂಡಿರುವಂತೆ ಸೂಕ್ತ ವಾತಾವರಣ ಕಲ್ಪಿಸಲು ಅಭಯಾರಣ್ಯಗಳ ಸ್ಥಾಪನೆ ನಡೆದಿದೆ. ಇದೇ ಉದ್ದೇಶದಿಂದ ಜುಲೈ 1955ರಲ್ಲಿ ನಾಗರಹೊಳೆ ಅಭಯಾರಣ್ಯವನ್ನು ಸ್ಥಾಪಿಸಲಾಯಿತು.

ಮೈಸೂರು ಮತ್ತು ಮಡಿಕೇರಿಗಳಿಂದ ತಲಾ 96 ಕಿ.ಮೀ. ಗಳ, ಹುಣಸೂರಿನಿಂದ 48 ಕಿ.ಮೀ. ದೂರದ ಅಂತರದಲ್ಲಿ ನಾಗರಹೊಳೆ ಅಭಯಾರಣ್ಯವಿದೆ. ಕೊಡಗಿನ ಆಗ್ನೇಯ ದಿಕ್ಕಿನಲ್ಲಿ 570 ಚದರ ಕಿ.ಮೀ. ವ್ಯಾಪ್ತಿಯ ಕಾಯ್ದಿರಿಸಿದ ಅರಣ್ಯವನ್ನು ಹೊಂದಿರುವ ನಾಗರಹೊಳೆಯಲ್ಲಿ ಕಾಕನಕೋಟೆ, ತಿತ್ತಿಮತ್ತಿ, ಕಲ್ಲಹಳ್ಳ ಮತ್ತು ನಾಗರಹೊಳೆಗಳೆಂಬ ನಾಲ್ಕು ಅರಣ್ಯವಲಯಗಳಿವೆ. ಪೂರ್ವ ಮತ್ತು ಆಗ್ನೇಯ ದಿಕ್ಕುಗಳಲ್ಲಿ ಮೈಸೂರಿನ ಗಡಿ ಅರಣ್ಯಕ್ಕೆ ಹೊಂದಿಕೊಂಡಿರುವ ನಾಗರಹೊಳೆ, ದಕ್ಷಿಣದಲ್ಲಿ ಕೇರಳ ರಾಜ್ಯದ ವೈನಾಡು ಅರಣ್ಯಗಳ ಗಡಿ ಹೊಂದಿದೆ. ಸಮುದ್ರ ಮಟ್ಟಕ್ಕೆ 2500 ಅಡಿಗಳ ಎತ್ತರದಲ್ಲಿರುವ ಈ ಎಲ್ಲಾ ಪ್ರದೇಶ ಹೆಚ್ಚಾಗಿ ತಪ್ಪಲು ಪ್ರದೇಶವಾಗಿದೆ. ದಟ್ಟ ಮತ್ತು ಸುಂದರ ಅರಣ್ಯವುಳ್ಳ

Sri Vidyabharathi Book Centre, Sringeri

CC-O. In Public Domain. Digitized by eGangotri



ಈ ಭಾಗದಲ್ಲಿ ದಕ್ಷಿಣ ಭಾರತದಲ್ಲಿನ ಎಲ್ಲಾ ಮುಖ್ಯ ಮರಗಳನ್ನೂ ಕಾಣಬಹುದಾಗಿದೆ. 5600 ಹೆಕ್ಟೇರ್‌ಗಳಷ್ಟು ವಿಸ್ತೀರ್ಣದ ಇಲ್ಲಿನ ಸಾಗುವಾನಿ ಪ್ಲಾಂಟೇಷನ್ನಿನಲ್ಲಿ, 1868ನೇ ಸಾಲಿನ ಹಳೆಯ ಸಾಗುವಾನಿ ಪ್ಲಾಂಟೇಷನ್ ಕಾರ್ಮಾಡಿನಲ್ಲಿ ಕಾಣಬಹುದಾಗಿತ್ತು.

ಕೊಡಗಿನ ರಾಜರ ಆಳ್ವಿಕೆಯ ಕಾಲದಲ್ಲಿ, ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಮನೋರಂಜನೆಗಾಗಿ ಬೇಟೆಯಾಡುವುದು ವಾರ್ಷಿಕ ವೈಶಿಷ್ಟ್ಯವೆನಿಸಿತ್ತು. ಇಂತಹ ಒಂದು ಮನೋರಂಜನೆಯ ಬೇಟೆಯಲ್ಲಿ ಲಿಂಗರಾಜನು ಒಂದು ವರ್ಷದಲ್ಲಿರತಕ್ಕ ದಿನಗಳಷ್ಟು ಸಂಖ್ಯೆಯ ಹುಲಿಗಳನ್ನು ಕೊಂದನೆಂದು ಹೇಳಲಾಗಿದೆ. ಕಾಡಾನೆಗಳಿಂದ ತಮಗೆ ಮತ್ತು ತಾವು ಬೆಳೆದ ಬೆಳೆಗೆ ಆದ ಹಾನಿಯನ್ನು ತಡೆದುಕೊಳ್ಳಲಾರದೆ, ಕೊಡಗಿನ ಜನರು ಮಹಾರಾಜ ವೀರರಾಜೇಂದ್ರನ ಮೊರೆ ಹೊಕ್ಕಾಗ, ಜನರ ಕಷ್ಟ ನಿವಾರಣೆಯ ಸಲುವಾಗಿ ಅರಣ್ಯಗಳಲ್ಲಿ ಸತತ ಬೇಟೆಯಾಡಿ 233 ಆನೆಗಳನ್ನು ಕೊಂದು, 181 ಆನೆಗಳನ್ನು ಸೆರೆಹಿಡಿದು ರಾಜಧಾನಿಗೆ ಹಿಂದಿರುಗಿ ಬಂದ ಘಟನೆಯೊಂದನ್ನು, ವೀರರಾಜೇಂದ್ರನು 1822 ರಲ್ಲಿ ಕೆತ್ತಿಸಿದ ಶಿಲಾಶಾಸನವೊಂದರಿಂದ ತಿಳಿಯಬಹುದಾಗಿದೆ. ಈ ಘಟನೆ ಅಂದಿನ ರಾಜ ತನ್ನ ಪ್ರಜೆಗಳ ಹಿತದೃಷ್ಟಿಯಿಂದ, ಪ್ರಜಾಪಾಲನೆಗಾಗಿ ನಡೆಸಿದ ಅದ್ಭುತ ಸಾಹಸವೇ ಆಗಿದೆ. ಈ ಶಿಲಾಶಾಸನವನ್ನು ಮಡಿಕೇರಿ ಕೋಟೆಯಲ್ಲಿರುವ ಪ್ರಾಚೀನ ವಸ್ತುಸಂಗ್ರಹಾಲಯದಲ್ಲಿ ಇಂದಿಗೂ ಕಾಣಬಹುದಾಗಿದೆ. ವನ್ಯಪ್ರಾಣಿಗಳ ಬೇಟೆ ಮೊದಮೊದಲು ಅನ್ಯಮಾರ್ಗವಿಲ್ಲದೆ ಪ್ರಜಾಹಿತಾಸಕ್ತಿಗಾಗಿ ನಡೆದುಬಂತು. ಅನಂತರ 1835 ರಿಂದ 1947 ರವರೆಗೆ ಬ್ರಿಟಿಷರ ಆಳ್ವಿಕೆಯಲ್ಲಿ ಮನೋರಂಜನೆಗೆಂದೇ ನಡೆಯಿತು. ನಾಗರಹೊಳೆ ಪ್ರದೇಶದಲ್ಲಿ ಹೇರಳವಾಗಿದ್ದ ಹುಲಿ, ಆನೆಗಳ ಸಂತತಿ ಕ್ಷೀಣತೆ ಈ ರೀತಿಯಾದರೆ, 1947 ರಿಂದ 1955 ರವರೆಗೆ ಇತರ

SriVidyabharathi Book Centre, Sringeri

CC-O. In Public Domain. Digitized by eGangotri



ಸಾಧುಪ್ರಾಣಿಗಳ ಬೇಟೆ ಅವ್ಯಾಹತವಾಗಿ ಒಂದಲ್ಲ ಒಂದು ಕಾರಣ ದಿಂದ ಮುಂದುವರಿದುಕೊಂಡು ಬಂದಿತು. ಇದನ್ನು ಗಂಭೀರ ವಾಗಿ ಗಮನಿಸಿದ ಆಡಳಿತಗಾರರು, ನಾಗರಹೊಳೆಯಲ್ಲಿನ ವಿವಿಧ ವನ್ಯಪ್ರಾಣಿಗಳ ರಕ್ಷಣೆ ಮತ್ತು ಅಭಿವೃದ್ಧಿಗಳನ್ನು ಗಮನದಲ್ಲಿಟ್ಟು ಕೊಂಡು, ನಾಗರಹೊಳೆಯನ್ನು ಅಭಯಾರಣ್ಯವೆಂದು ಘೋಷಿಸಿ ವನ್ಯಮೃಗಗಳ ನಿರ್ಭಯ ಜೀವನಕ್ಕೆ ನಾಂದಿ ಹಾಕಿದರು. ಹಿಂದಿನ ರಾಜ್ಯಪಾಲ ಶ್ರೀ ಎಸ್. ಧರ್ಮವೀರ ಅವರ ಕಾಲದಲ್ಲಿ ಈ ಅಭಯಾರಣ್ಯ ವ್ಯವಸ್ಥಿತವಾಗಿ ಬೆಳೆದುಬಂತು. ನಲ್ಕೇರಿ, ಹಾಟಗಾಟಿ ಮತ್ತು ಅರಕೇರಿ ಮನ್ನಾಜಂಗಲ್ ಸೇರಿ ನಾಗರಹೊಳೆ 284 ಕಿ.ಮೀ. ವಿಸ್ತೀರ್ಣ ಪ್ರದೇಶವನ್ನೊಳಗೊಂಡಿತು. ಪ್ರಸಕ್ತದ ದಿನಗಳಲ್ಲಿ ನಾಗರಹೊಳೆ ಬಹು ಜನಪ್ರಿಯ ಮೃಗಧಾಮ ವೆನಿಸಿದೆ. 1960 ರಲ್ಲಿ 2500 ಪ್ರವಾಸಿಗರು, 1981 ರಲ್ಲಿ 24,000 ಪ್ರವಾಸಿಗರು ಭೇಟಿ ನೀಡಿರುವ ಅಂಕಿ–ಅಂಶಗಳು, ಈ ಅಭಯಾರಣ್ಯ ಹೆಚ್ಚು ಹೆಚ್ಚು ಜನರಿಂದ ಹೇಗೆ ಆಕರ್ಷಿತವಾಗು ತ್ತಿದೆ ಎಂಬುದನ್ನು ತಿಳಿಸುತ್ತದೆ. ವಿಶಾಲ ಕರ್ನಾಟಕ ರಚನೆಯಾದ ನಂತರ ಮೈಸೂರು ಜಿಲ್ಲೆಯ ಕಾಕನಕೋಟೆ, ಮೇಟುಕುಪ್ಪೆ, ವೀರನಹೊಸಳ್ಳಿ ಮತ್ತು ಕಬಿನಿವಿನಳ್ಳಿ ಮನ್ನಾಜಂಗಲು ಸೇರಿ, ಈ ಅಭಯಾರಣ್ಯವನ್ನು 570 ಚದರ ಕಿ.ಮೀ. ಗಳಷ್ಟು ವಿಸ್ತಾರ ಗೊಳಿಸಲಾಯಿತು.

ಕೊಡಗಿನ ನಾಗರಹೊಳೆ ಮತ್ತು ಮೈಸೂರಿನ ಕಾಕನಕೋಟೆ ಗಳೆರಡೂ ರಾಜಮಹಾರಾಜರ ಹಾಗೂ ಬ್ರಿಟಿಷರ ಆಳ್ವಿಕೆಯಲ್ಲಿ ಮನೋರಂಜನೆ ಮತ್ತು ಬೇಟೆಗಳಿಗಾಗಿ ಮೀಸಲಾಗಿದ್ದ ಹೆಸರಾಂತ ಅರಣ್ಯ ಪ್ರದೇಶಗಳು.

ಕಾರಾಪುರ ಬಂಗಲೆಯಲ್ಲಿರುವ ಅನೇಕ ಛಾಯಾಚಿತ್ರಗಳು ಅಲ್ಲಿನ ಗತಕಾಲದ ವೈಭವವನ್ನು ನೆನಪಿಗೆ ತರುತ್ತವೆ. ರಷ್ಯದ

Sri Vijayabharathi Book Centre, Shimoga

CC-O. In Public Domain. Digitized by eGangotri


ಡ್ಯೂಕ್ ರಾಜಕುಮಾರರೊಬ್ಬರು ತಮ್ಮ ಬೇಟೆ ಗುಂಪಿನೊಡನಿರುವ ಚಿತ್ರ ಅಲ್ಲಿನ ಅತ್ಯಂತ ಪುರಾತನ ಚಿತ್ರವೆನಿಸಿದೆ. ಅದು 1895ರಲ್ಲಿನ ಸಾಲಿನದು. ದೇಶ ವಿದೇಶಗಳ ರಾಜಮಹಾರಾಜರು, ಮಹಾರಾಣಿಯರು, ವೈಸರಾಯ್‌ಗಳು, ರಾಯಭಾರಿಗಳು, ಪ್ರಮುಖ ವ್ಯಕ್ತಿಗಳು ಕಾಕನಕೋಟೆಗೆ ಮನೋರಂಜನಾ ಬೇಟೆಗೆ ಬಂದಾಗ ತೆಗೆದ ಛಾಯಾಚಿತ್ರಗಳು ಗತಕಾಲದ ನೆನಪುಗಳನ್ನು ಮರುಕಳಿಸುತ್ತವೆ. ಕಾರಾಪುರದ ಬಂಗಲೆ ಅತ್ಯಂತ ಆಕರ್ಷಕವಾದುದು ಮತ್ತು ಹರ್ಷತರುವ ತಾಣವಾಗಿದೆ. ಈ ಬಂಗಲೆಗೆ ಒಂದು ಕಡೆ ಮಾತ್ರ ಪ್ರವೇಶವಿದ್ದು, ಉಳಿದ ಕಡೆ ಕಬಿನಿ ಜಲಾಶಯದ ನೀರು ಸುತ್ತುವರೆದಿದೆ. ಬಂಗಲೆಯ ಮುಂದೆ ವಿಶಾಲ ಬಯಲಿದ್ದು ಕುದುರೆ ಸವಾರಿ ನಡೆಸಲು ಯೋಗ್ಯವಾಗಿದೆ. ಸ್ಥಳೀಯ ಬಣ್ಣದ ಉದ್ಯಾನದ ಮರಗಿಡಗಳು, ಪುಷ್ಪಗಳು ಬಂಗಲೆಗೆ ವಿಶೇಷ ಮೆರಗು ನೀಡಿವೆ. ದೋಣಿಗಳಲ್ಲಿ ವಿಹಾರ ನಡೆಸಲು, ಮೀನು ಹಿಡಿಯಲು ಹಾಗೂ ಸೊಗಸಿನ ಈಜುಗಾರಿಕೆಗೆ ಕಬಿನಿ ಜಲಾಶಯ ಆಸರೆಯಾಗಿದೆ. ಕಬಿನಿ ಜಲಾಶಯದ ಇನ್ನೊಂದು ದಂಡೆಗೆ ಸೇರಿಕೊಂಡಿರುವುದೇ ಬಂಡಿಪುರ ಅರಣ್ಯಧಾಮ.

## ವನ್ಯಸಂಪತ್ತು

ಮಹಾಭಾರತದ ಕಾಲದಿಂದ, ಪುರೂರವನ ಕಾಲದವರೆಗೂ ಅರಣ್ಯಗಳಲ್ಲಿನ ಕಾಡಾನೆಗಳನ್ನು ಹಿಡಿದು ಪಳಗಿಸಿ, ಅವುಗಳ ಸೇವೆಯನ್ನು ಮಾನವನ ಹಿತಕ್ಕಾಗಿ ಉಪಯೋಗಿಸುತ್ತಿರುವುದನ್ನು ಕೇಳಿದ್ದೇವೆ. ಆನೆಗಳನ್ನು ಹಿಡಿದು ಪಳಗಿಸಿ ಮಾನವನ ಉಪಯೋಗಕ್ಕಾಗಿ ಬಳಸಿಕೊಳ್ಳುವ ಮತ್ತು ಜೊತೆಗೇ ಮನೋರಂಜನೆ ಪಡೆಯುವ ವ್ಯವಸ್ಥೆಯನ್ನು ಬ್ರಿಟಿಷರು ಭಾರತದಲ್ಲಿ ಸ್ಥಾಪಿಸಿದರು. ಕೆಳದಿ

Sri Vidyabharathi Book Centre, Sirsi

CC-O. In Public Domain. Digitized by eGangotri



ಸನ್ ಎಂಬ ಅಧಿಕಾರಿ ಕರ್ನಾಟಕದ ಕಾಕನಕೋಟೆ ಅರಣ್ಯದಲ್ಲಿ "ಖೆಡ್ಡಾ" ಕಾರ್ಯಕ್ರಮವನ್ನು 1874ರಲ್ಲಿ ಆರಂಭಿಸಿದುದನ್ನು ನಾವು ತಿಳಿದಿದ್ದೇವೆ. ಅಂದಿನಿಂದ 1971ರವರೆಗೆ ಕಾಕನಕೋಟೆ ಮತ್ತು ಚಾಮರಾಜನಗರ ತಾಲೂಕಿನ ಬೂದಿ ಪಡಗಗಳಲ್ಲಿ, ಒಟ್ಟು 36 ಖೆಡ್ಡಾ ಆಚರಣೆಗಳು ನಡೆದಿದ್ದು, ಇವುಗಳಲ್ಲಿ ಒಟ್ಟು 1977 ಆನೆಗಳು ಹಿಡಿಯಲ್ಪಟ್ಟಿವೆ. 1971ರ ನಂತರ ಖೆಡ್ಡಾ ಕಾರ್ಯಕ್ರಮಕ್ಕೆ ಇತಿಶ್ರೀ ಹಾಡಲಾಯಿತು. ಕಾರಣ ಸ್ಯಾಂಡರ್‌ಸನ್ ಅವರು ಖೆಡ್ಡಾ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಿದ್ದ ಹೆಸರಾಂತ ಸ್ಥಳ ಕಬಿನಿ ಜಲಾಶಯದಲ್ಲಿ ಮುಳುಗಡೆಯಾದದ್ದು. ಅರಣ್ಯ ಮತ್ತು ಕಾಡಾನೆಗಳು ಸಮೃದ್ಧಿಯಾಗಿದ್ದ ಕಾಲದಲ್ಲಿ ನಡೆಯುತ್ತಿದ್ದ, ವೈಭವದ ರೋಮಾಂಚಕಾರಿ ಖೆಡ್ಡಾ ಇಂದು ನೆನಪಿನಲ್ಲಿ ಮಾತ್ರ ಉಳಿಯುವಂತಹುದು. ಇಂದಿನ ಪರಿಸ್ಥಿತಿಯಲ್ಲಿ ಅದನ್ನು ನಡೆಸಿಕೊಂಡು ಹೋಗುವಂತಿಲ್ಲ. ಕಾರಣ ಅರಣ್ಯವೂ ಕಡಮೆಯಾಗುತ್ತಿದೆ–ಕಾಡಾನೆಗಳೂ ಕಡಮೆಯಾಗಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ಇದನ್ನು ನಡೆಸುವುದು ಒಂದು ಮಹಾಸಾಧನೆಯ ಕಾರ್ಯ. ಅಲ್ಲದೆ ಕಾಡಿನಲ್ಲಿಯ ಇತರ ಪ್ರಾಣಿಗಳಿಗೆ ತೊಂದರೆ. ಸಧ್ಯಕ್ಕೆ ಇಲಾಖೆಯ ಸಾಕಿದ ಆನೆಗಳು ಹಾಕಿದ ಮರಿ ಆನೆಗಳೇ ಇಲಾಖಾ ಕೆಲಸಗಳು, ಮತ್ತಿತರ ಅಗತ್ಯವಾದ ಸೇವೆಯನ್ನು ಸಲ್ಲಿಸಲು ನೆರವಾಗುವುವು. ಇದರಿಂದಲೂ ಖೆಡ್ಡಾ ಅನವಶ್ಯವೆನಿಸಿದೆ.

ಅಗತ್ಯವೆನಿಸಿದರೆ ಆನೆಗಳನ್ನು ಕಪ್ಪದಲ್ಲಿ (ಹೊಂಡದಲ್ಲಿ) ಹಿಡಿಯುವುದು ಸುಲಭ. ಇದರಿಂದ ಆನೆ ಮತ್ತು ಮಾನವರಿಬ್ಬರಿಗೂ ಹಿತ. ಹಿಡಿದ ಕಾಡಾನೆಗಳನ್ನು ಪಳಗಿಸಿ ಅವುಗಳಿಗೆ ಕೆಲಸ ಕಲಿಸಲು, ನಾಗರಹೊಳೆಯ 'ಹೆಬ್ಬಳ್ಳ' ಹಾಗೂ ಕಾಕನಕೋಟೆ ಪ್ರದೇಶದ ಬಳ್ಳಿಗಳಲ್ಲಿ ಆನೆ ತರಬೇತಿ ಕೇಂದ್ರಗಳಿವೆ. ಇಲ್ಲಿ ಅರಣ್ಯ ಇಲಾಖೆಗೆ ಸೇರಿದ ತಾಯಿ ಆನೆಗಳಿಂದ ಬೇರ್ಪಡಿಸಿದ ಮರಿಗಳಿಗೂ

Sri Vidyabharathi Book Centre, Sringeri

CC-O. In Public Domain. Digitized by eGangotri



ತರಬೇತಿ ನೀಡಲಾಗುತ್ತದೆ. ತರಬೇತಿ ನೀಡಲು ನುರಿತ ಗಿರಿಜನ ಮಾವುತರೂ, ಕೊತ್ತಾಲರೂ ಇಲ್ಲಿದ್ದಾರೆ. ಸುಮಾರು 6 ರಿಂದ 12 ತಿಂಗಳುಗಳಲ್ಲಿ ಒಂದು ಆನೆಗೆ ಒಳ್ಳೆಯ ತರಬೇತಿ ಕೊಡಬಹುದಾಗಿದೆ. ಈ ಸ್ಥಳಗಳಲ್ಲಿ ಆನೆ ತರಬೇತಿಗೆ ಸೂಕ್ತ ಸ್ಥಳಾವಕಾಶ ಮತ್ತು ವಾತಾವರಣಗಳಿವೆ.

ನಾಗರಹೊಳೆಯಲ್ಲಿ ಅಮೂಲ್ಯ ಸಸ್ಯ ಸಂಪತ್ತಿನೊಡನೆ, ಅಪಾರ ಪ್ರಾಣಿ ಹಾಗೂ ಪಕ್ಷಿಗಳ ಸಮೂಹಗಳಿವೆ. ಪ್ರಾಣಿಗಳಲ್ಲೆಲ್ಲಾ ಅತಿ ದೊಡ್ಡದೆನಿಸಿದ ಆನೆಯನ್ನು ನಾಗರಹೊಳೆ, ತಿತ್ತಿಮತ್ತಿ ಅರಣ್ಯ ವಲಯಗಳು ಹಾಗೂ ವೈನಾಡು ಗಡಿ ಅರಣ್ಯಗಳಲ್ಲಿ ಕಾಣಬಹುದು. ಬೇಸಿಗೆ ದಿನಗಳಲ್ಲಿ ಇವುಗಳು ಕುಶಾಲನಗರ ಹಾಗೂ ಸೋಮವಾರಪೇಟೆಗಳವರೆಗೂ ಅಲೆದಾಡಿಕೊಂಡು ಬರುವುದನ್ನು ನಾವು ಕಾಣಬಹುದು. ಮಳೆಗಾಲ ಪ್ರಾರಂಭಿಸಿದಂತೆ ಅವುಗಳು ಕಾಕನಕೋಟೆ ಕಡೆ ಸಾಗಿ ಅರಣ್ಯದ ಬಿದಿರು ಮೆಳೆಗಳಲ್ಲಿ ಸ್ವೇಚ್ಛೆಯಿಂದ ವಾಸಿಸುವುವು. ವನ್ಯಮೃಗ ರಕ್ಷಣಾ ಕಾಯಿದೆಯಂತೆ ಆನೆಗಳನ್ನು ಯಾರೂ ಕೊಲ್ಲುವಂತಿಲ್ಲ. ಕೊಡಗು ರಾಜ್ಯದಲ್ಲಿ 1879ನೇ ಸಾಲಿನಲ್ಲಿಯೇ ಆನೆ ಸಂರಕ್ಷಣಾ ಕಾಯಿದೆಯನ್ನು ರೂಪಿಸಿ ಅದನ್ನು ಪಾಲಿಸಿಕೊಂಡು ಬರಲಾಗಿದೆ. ಆನೆಗಳೊಡನೆ ಈ ಅರಣ್ಯದಲ್ಲಿ ಹುಲಿ, ಚಿರತೆ, ಗುಳ್ಳೆನರಿ, ನರಿ, ತೋಳ, ಮುಳ್ಳು ಹಾಗೂ ಕಾಡುಹಂದಿ, ಕರಡಿ, ಮುಂಗಸಿ, ಹನುಮಾನ್ ಕೋತಿ, ಕಾಡುಕುರಿ, ಕೆಂಪು ಅಳಿಲು, ಹಾರುವ ಅಳಿಲು, ಕಾಡುನಾಯಿ, ಕಾಡುಬೆಕ್ಕುಗಳು, ಜಿಂಕೆ, ಮೊಲ ಮುಂತಾದ ವೈವಿಧ್ಯಮಯ ಪ್ರಾಣಿ ವರ್ಗಗಳಿವೆ. ಬಗೆಬಗೆಯ ಸರೀಸೃಪಗಳು, ಪಕ್ಷಿಗಳಿಗೇನೂ ಕೊರತೆಯಿಲ್ಲ. ಹಬ್ಬಾವು, ನಾಗರಹಾವು, ಹಸಿರುಹಾವು, ಇಲಿಹಾವು, ಕೇರೆಹಾವು, ದಾಸರ ಹಾವುಗಳನ್ನು ಕಾಣಬಹುದು. ಪಕ್ಷಿಗಳಲ್ಲಿ ನವಿಲು, ಕೋಗಿಲೆ, ಮೈನಾ, ಪಿಕ್ಕಿ, ಹಮ್ಮು, ರಣಹದ್ದು,

Sri Vidyabharathi Book Centre, Kringen

CC-O. In Public Domain. Digitized by eGangotri



ವರ್ಣೀಯ ಕೊಕ್ಕರೆ (Painted Stork)

Sri Vidyabharathi Book Centre, Sringeri

CC-O. In Public Domain. Digitized by eGangotri


ಗೂಬೆ, ಗಿಣಿ, ಗುಬ್ಬಚ್ಚಿ, ಹಸಿರು ಪಾರಿವಾಳ ಮುಂತಾದವುಗಳನ್ನು ನೋಡಬಹುದಾಗಿದೆ.

ವೈವಿಧ್ಯಮಯ ಸಸ್ಯ ಸಮೂಹಗಳಲ್ಲಿ ತೇಗ, ಶ್ರೀಗಂಧ, ಬೀಟೆ, ಹೊನ್ನೆ, ನಂದಿ, ಮತ್ತಿ, ಬೊಂಬು, ಎತ್ತೇಗ, ಮಾವು, ಅಳಲೆ, ಬಿಲ್ವಾರ, ದಿಂಡಿಗೆ, ಬೂರುಗ, ಬೆಂಡೆ, ನೇರಲು, ಸಂಪಿಗೆ, ತಡಸಲು ಮುಂತಾದವುಗಳನ್ನು ಕಾಣಬಹುದು.

## ಪ್ರಾಣಿಸಂಪತ್ತು

### ಆನೆ

ಪ್ರಬಾಸಿಡಿಯಾ ಕುಲಕ್ಕೆ ಸೇರಿದ ಸಸ್ತನಿ. ಜೀವಂತ ಭೂಚರ ಪ್ರಾಣಿಗಳಲ್ಲಿ ಅತಿ ದೊಡ್ಡದು. ತೂಕ, ಎತ್ತರ ಮತ್ತು ಗಾತ್ರದಲ್ಲಿ ಇದಕ್ಕೆ ಸರಿಸಮನಾದ ಮತ್ತೊಂದು ಪ್ರಾಣಿಯಿಲ್ಲ. ಪುರಾಣಗಳ ಕಾಲದಿಂದ ಪುರೂರವನ ಕಾಲದವರೆಗೂ ಮನುಷ್ಯನ ಜೀವನದೊಂದಿಗೆ ನಿಕಟ ಸಂಪರ್ಕ ಹೊಂದಿರುವ ಕಾಡು ಪ್ರಾಣಿಗಳಲ್ಲಿ ಆನೆ ಮೊದಲನೆಯದು.

ಕುರುವಂಶದ ರಾಜಧಾನಿಯ ಹೆಸರೇ ಹ ಸ್ತಿ ನಾ ಪು ರ. ಬಹುಶಃ ಕೌರವರು ಹೊಂದಿದ್ದ ಆನೆಗಳ ಸಂಖ್ಯಾಬಲದಿಂದ ಈ ಹೆಸರು ಹಸ್ತಿನಾಪುರಕ್ಕೆ ಬಂದಿರಬಹುದು. ಹಸ್ತಿ ಅಥವಾ ಹಾಥಿ ಎಂದರೆ ಹಿಂದಿಯಲ್ಲಿ ಆನೆ ಎಂದು ಅರ್ಥ.

ನಾಗರಹೊಳೆಯಲ್ಲಿರುವ ಆ ನೆ ಗ ಳು ಹಿಂದೂ ದೇಶದ ಆನೆಯ ಜಾತಿಗೆ ಸೇರಿದವುಗಳು. ಈ ಜಾತಿಯ ಆನೆ ಇಂಡಿಯಾ, ಶ್ರೀಲಂಕಾ, ಬರ್ಮಾ, ಸಿಕ್ಕಿಂ, ಥಾಯಲ್ಯಾಂಡ್, ಸಯಾಂ, ಮಲಯಾ, ಬೋರ್ನಿಯಾ–ಸುಮಾತ್ರಾದಲ್ಲಿ ಕಂಡುಬರುತ್ತವೆ. ಇಂಡಿಯಾ ದೇಶದಲ್ಲಿ ಕೇರಳ, ತಮಿಳುನಾಡು, ಕರ್ನಾಟಕ, ಒರಿಸ್ಸಾ

CC-O. In Public Domain. Digitized by eGangotri


ಬಿಹಾರ, ಬೆಂಗಾಳ, ಅಸ್ಸಾಂ, ಉತ್ತರ ಪ್ರದೇಶಗಳು ಆನೆಯ ತವರು ಪ್ರದೇಶಗಳಾಗಿವೆ.

ಆನೆಗಳು ಯಾವಾಗಲೂ ಹಿಂಡುಹಿಂಡಾಗಿ ಸಂಚರಿಸುತ್ತವೆ. ಒಂದು ಹಿಂಡಿನಲ್ಲಿ ಸುಮಾರು 15–30 ರವರೆಗೆ ಎಲ್ಲಾ ವಯಸ್ಸಿನ ಪ್ರಾಣಿಗಳೂ ಇರುತ್ತವೆ. ಅಧಿಕ ವಯಸ್ಸಿನ ಹೆಣ್ಣು ಆನೆ ಹಿಂಡಿನ ಮುಂದಾಳುತನವನ್ನು ವಹಿಸುತ್ತದೆ. ಕೆಲವೊಮ್ಮೆ ಸಲಗ ಮದವೇರಿದಾಗ, ರೊಚ್ಚಿಗೆದ್ದಾಗ ಅಪಾಯಕಾರಿಯಾಗಬಹುದು. ಅಂಥ ಮದಗಜ ಹಿಂಡಿನಿಂದ ಹೊರದೂಡಲ್ಪಡುತ್ತದೆ. ಹೆಣ್ಣು ಆನೆ 607–614 ದಿವಸಗಳ ಗರ್ಭಧಾರಣೆಯ ಅನಂತರ ಒಂದು ಮರಿಯನ್ನು ಈಯುತ್ತದೆ. ಮರಿ 2 ವರ್ಷಗಳ ತನಕ ತಾಯಿಯ ಪೋಷಣೆಯಲ್ಲಿರುತ್ತದೆ. ಮುಂಗಾಲುಗಳ ಹಿಂದೆ ಇರುವ ಎರಡು ಸ್ತನಗಳಿಂದ ಮರಿ ಸೊಂಡಿಲನ್ನು ಪಕ್ಕಕ್ಕೆ ಸರಿಸಿ ಬಾಯಿಂದ ಹಾಲು ಕುಡಿಯುತ್ತವೆ.

ಏಷ್ಯಾದ ಆನೆಗಳು ಬಹಳ ಹಿಂದಿನಿಂದಲೂ ಮನುಷ್ಯನಿಗೆ ಉಪಯುಕ್ತ ಪ್ರಾಣಿಯೆನಿಸಿದೆ. ಕಾಡಾನೆಗಳನ್ನು ಪಳಗಿಸಿ ಮಠ ಮಾನ್ಯಗಳಲ್ಲಿ, ಅರಮನೆಗಳಲ್ಲಿ ಗೌರವ ಸಂಕೇತವಾಗಿ ಇಡುತ್ತಿದ್ದರು. ರಣರಂಗದಲ್ಲಿ ಆನೆಗಳ ದಳವನ್ನೇ ಬಳಸುತ್ತಿದ್ದರು. ಈಗಲೂ ಕಾಡುಗಳಲ್ಲಿ ಮರದ ದಿಮ್ಮಿಗಳನ್ನು ಎಳೆಸಲು ಆನೆಯನ್ನು ಬಳಸುತ್ತಾರೆ. ಆನೆಗಳನ್ನು ಹಿಡಿದು ಅವುಗಳನ್ನು ಪಳಗಿಸುವುದು ಒಂದು ದೊಡ್ಡ ವಿದ್ಯೆ. ಇದು ಕೆಲವು ಜನಾಂಗಕ್ಕೆ ಕುಲ ಕಸುಬು. ಇಂಡಿಯಾದಲ್ಲಿ ಮುಸಲ್ಮಾನರು ಮತ್ತು ಕಾಡುಕುರುಬರು ಬರ್ಮಾದಲ್ಲಿ ಕರೆನ್ಸ, ತಾಲ್ಮೆಸ್ ಮತ್ತು ಲೇಯಾನ್ ಎಂಬ ಜನಗಳು ಸಿಲೋನ್‌ನಲ್ಲಿ ಮೂಕ ಜನಗಳು ಆನೆಗಳನ್ನು ಹಿಡಿದು ಪಳಗಿಸುವುದರಲ್ಲಿ ಬಹಳ ಚೆನ್ನಾಗಿ ನುರಿತವರು.

ಆನೆಗಳನ್ನು ಹಿಡಿಯುವುದರಲ್ಲಿ ಮೂರು ವಿಧಾನಗಳುಂಟು:

Sri Vidyabharathi Book Centre, Sringeri

CC-O. In Public Domain. Digitized by eGangotri


ಮೊದಲನೆಯದು ಖೆಡ್ಡಾ ಮಾಡಿ ಹಿಡಿಯುವುದು. ಆನೆಗಳು ಇರುವ ಕಾಡಿನ ಮಧ್ಯದಲ್ಲಿ ನೀರಿನ ಮತ್ತು ಮರಗಳ ನೆರಳಿನ ಅನುಕೂಲವಿರುವ ಸ್ಥಳವನ್ನು ಹುಡುಕಿ ಆ ಸ್ಥಳದ ಸುತ್ತಲೂ 7 ಅಥವಾ 8 ಅಡಿ ಅಗಲ ಮತ್ತು 10 ಅಡಿಗಳ ಆಳವಿರುವ ತ್ರಿಕೋನಾಕಾರದ ಗುಂಡಿಯನ್ನು ತೆಗೆಸಿ, ಒಂದು ಕಡೆ ಬಾಗಿಲನ್ನಿಟ್ಟು ಆನೆಗಳ ಹಿಂಡನ್ನು ಈ ಬಾಗಿಲ ಮುಖಾಂತರ ಒಳಗೆ ಸೇರಿಸುವುದಕ್ಕೆ "ಖೆಡ್ಡಾ" ಎಂದು ಕರೆಯುತ್ತಾರೆ. ಈ ವಿಧಾನದಲ್ಲಿ ಆನೆಗಳನ್ನು ಹಿಡಿಯಲು ಸಾವಿರಾರು ಜನಗಳು, 40 ಅಥವಾ 50 ಪಳಗಿದ ಸಹಾಯಕ ಆನೆಗಳು ಬೇಕಾಗುತ್ತವೆ. ಎರಡನೆಯದು ಆನೆಗಳು ಸಂಚಾರ ಮಾಡುವ ಮಾರ್ಗದಲ್ಲಿ ದೊಡ್ಡ ಗುಂಡಿಗಳನ್ನು ತೆಗೆದು (10 ಅಡಿ ಉದ್ದ, 10 ಅಡಿ ಅಗಲ ಮತ್ತು 10 ಅಡಿ ಆಳ) ಅವುಗಳಲ್ಲಿ ಒಂದಕ್ಕೂ ಗೋಚರವಾಗದಂತೆ ಸೊಪ್ಪು ಪೊದೆಗಳ ಹೊದಿಕೆ ಹಾಕಿ ಆನೆಗಳನ್ನು ಹಿಡಿಯುತ್ತಾರೆ. ಈ ವಿಧಾನದಲ್ಲಿ ಒಂದು ಅಥವಾ ಎರಡು ಆನೆಗಳನ್ನು ಹಿಡಿಯಲು ಸಾಧ್ಯ. ಈ ವಿಧಾನಕ್ಕೆ ಜಾಸ್ತಿ ಜನವಾಗಲಿ ಅಥವಾ ಆನೆಗಳಾಗಲಿ ಬೇಕಾಗುವುದಿಲ್ಲ. ಬಯಲು ಶಿಕಾರಿಯಿಂದ ಹಿಡಿಯುವುದು ಮೂರನೆಯ ವಿಧಾನ. ಇದರಲ್ಲಿ ಒಂಟಿ ಆನೆಯನ್ನು ಮಾತ್ರ ಪಳಗಿದ ಆನೆಗಳ ಸಹಾಯದಿಂದ ಹಿಡಿಯುತ್ತಾರೆ. ಇದಕ್ಕೂ ಕೂಡ ಹೆಚ್ಚಿಗೆ ಜನವಾಗಲಿ, ಆನೆಗಳಾಗಲಿ ಬೇಕಾಗುವುದಿಲ್ಲ. ಹೀಗೆ ಹಿಡಿದ ಆನೆಗಳನ್ನು ಪಳಗಿಸುವುದು ಆನೆ ಹಿಡಿಯುವವರಿಗೆ ಒಂದು ದೊಡ್ಡ ಕೆಲಸ. ಚಿಕ್ಕ ಮರಿಗಳಾದರೆ ಅವು ಬಹಳ ಜಾಗ್ರತೆ ಪಳಗುತ್ತವೆ. ದೊಡ್ಡ ಆನೆಗಳಾದರೆ ಬಹಳ ದಿವಸಗಳು ಬೇಕು. ಇದಕ್ಕೆ 6 ತಿಂಗಳಿನಿಂದ ಹಿಡಿದು ಒಂದು ವರ್ಷವಾದರೂ ಬೇಕು. ಪಳಗಿದ ಆನೆಗಳ ಸಹಾಯದಿಂದ ಈ ರೀತಿ ಹೊಸದಾಗಿ ಹಿಡಿದ ಆನೆಗಳನ್ನು ಪಳಗಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri


ಆನೆಗಳು ಸುಮಾರು ಮನುಷ್ಯನಷ್ಟೇ ಆಯಸ್ಸು ಪಡೆದಿವೆ. ಅರಣ್ಯ ಇಲಾಖೆಗಳಲ್ಲಿ ದಾಖಲು ಇಟ್ಟಿರುವ ಪ್ರಕಾರ ಸುಮಾರು 50 ವರ್ಷಕ್ಕೆ ಕೆಲಸದಿಂದ ನಿವೃತ್ತಿ ಹೊಂದುವಂತಾಗುತ್ತವೆ. ನಿವೃತ್ತಿ ಹೊಂದಿದ ಹತ್ತಾರು ವರ್ಷಗಳಲ್ಲಿ ಅವಸಾನ ಹೊಂದುತ್ತವೆ.

ಕಾಡಾನೆಗೆ ಅರಣ್ಯದಲ್ಲಿ ಮನುಷ್ಯನೇ ಅತ್ಯಂತ ಘೋರ ಶತ್ರು. ಅವನು ಆನೆಯನ್ನು ದಂತಕ್ಕಾಗಿ ಕೊಲ್ಲುತ್ತಾನೆ. ಅನೇಕ ವೇಳೆ ತನ್ನ ಬೇಸಾಯ ಫಸಲನ್ನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿ ಕೂಡ ಆನೆಯನ್ನು ಕೊಲ್ಲುತ್ತಾನೆ. ಕಾಡಿನಲ್ಲಿ ಹುಟ್ಟಿದ ಮರಿ ಆನೆ ಮಾತ್ರ ಹುಲಿ, ಚಿರತೆ, ಕಾಡುನಾಯಿ, ತೋಳಗಳ ಪಾಲಾಗುವ ಸಂದರ್ಭವುಂಟು. ಅದು ಬೆಳೆದು ನಿಂತ ಮೇಲೆ ಅದಕ್ಕೆ ಮನುಷ್ಯನ ವಿನಾ ಮತ್ತೆ ಯಾವ ವೈರಿಯೂ ಇಲ್ಲ. ನಾಗರಹೊಳೆಯ




Sri Vidyabharathi Book Centre, Sringeri

 CC-O. In Public Domain. Digitized by eGangotri 

ಪ್ರದೇಶದಲ್ಲಿ ಸುಮಾರು 300–400 ಆನೆಗಳ ಸಂಖ್ಯೆ ಇರಬಹುದೆಂದು ಅಂದಾಜು ಮಾಡಲಾಗಿದೆ.

## ಹುಲಿ

ಕ್ರೂರ ಮತ್ತು ಬಲಯುತವಾದ ಮಾಂಸಾಹಾರಿ ಕಾಡುಪ್ರಾಣಿಗಳಲ್ಲಿ ಹುಲಿಯ ಸ್ಥಾನವು ಉಚ್ಚವಾದುದು. ಹುಲಿಯ ವಾಸ ಸ್ಥಾನ ಸದಾ ಕಾಡು. ಹುಲಿಯನ್ನು ಪಳಗಿಸಿ ಮನುಷ್ಯನ ನಿಕಟವರ್ತಿಯನ್ನಾಗಿ ಮಾಡಿರುವುದು ಅತಿ ವಿರಳ. ಇತರ ಪ್ರಾಣಿಗಳೇ ಹುಲಿಯ ಆಹಾರ. ಮನುಷ್ಯನ ಪಾಲನೆಗೊಳಪಟ್ಟು ಪಳಗಿದ ಪ್ರಾಣಿಗಳುಳಿದು ಮಿಕ್ಕೆಲ್ಲಾ ಪ್ರಾಣಿಗಳೂ ಹುಲಿಯ ಆಹಾರಕ್ಕೆ ಗಮ್ಯವಾದವು. ಅಂದಮೇಲೆ ಹುಲಿಯ ಪ್ರಭಾವ ಮತ್ತು ಶಕ್ತಿ ಪ್ರಾಣಿಪ್ರಪಂಚದಲ್ಲಿ ಎಷ್ಟರಮಟ್ಟಿನದೆಂಬುದು ಅರಿವಾಗುತ್ತದೆ. ಹಿಂದೂ ಪುರಾಣಗಳಲ್ಲಿ ಅತಿ ಕ್ರೂರ ದೇವತೆ ದುರ್ಗಿಯ ವಾಹನ ಹುಲಿ. ವನ್ಯಪ್ರಾಣಿಗಳಲ್ಲಿ ಹುಲಿಯನ್ನು ಹೆದರಿಸುವ ಮೃಗ ಮತ್ತೊಂದಿಲ್ಲ. ಹುಲಿಯ ಸಂಕೇತವನ್ನಿಟ್ಟುಕೊಂಡು ಆಳಿದ ರಾಜ ಮಹಾರಾಜರುಗಳು ಚರಿತ್ರೆಯಲ್ಲಿ ಹೆಸರಾಗಿದ್ದಾರೆ.

ಹುಲಿಯ ಗಾತ್ರವನ್ನು ಮೂಗಿನ ತುದಿಯಿಂದ ಬಾಲದ ಕೊನೆಯವರೆಗೂ ಅಳೆದು ಗುರುತಿಸುತ್ತಾರೆ. ಸಮವಯಸ್ಸಿನ ಹುಲಿಯ ಉದ್ದ ಸುಮಾರು ಒಂಭತ್ತೂವರೆ ಅಡಿಗಳು ಮತ್ತು ಎತ್ತರ ನಾಲ್ಕರಿಂದ ನಾಲ್ಕೂವರೆ ಅಡಿಗಳು. ಹುಲಿಯ ಶರೀರ ಹಗ್ಗದ ಹಾಗೆ ಕುತ್ತಿಗೆಯಿಂದ ಸೊಂಟದವರೆಗೂ ಹೆಚ್ಚು ಕಡಮೆ ಒಂದೇ ಸಮನಾಗಿರುತ್ತದೆ. ಹುಲಿಯ ಬಣ್ಣ ಕಂದು ಮಿಶ್ರಣ ಶರೀರಾದ್ಯಂತ ಕಪ್ಪು ಪಟ್ಟೆಗಳಿಂದ ಕೂಡಿರುತ್ತದೆ.

ಈ ಪಟ್ಟೆಗಳು ಹುಲಿಯ ಜಾತಿಗೆ ಹೆಗ್ಗುರುತು. ಕೆಳಹೊಟ್ಟೆ ಪಟ್ಟಿಯನ್ನುಳಿದು ಮಾಸಲು ಬಿಳುಪಾಗಿರುತ್ತದೆ. ಹುಲಿಯ

CC-O. In Public Domain. Digitized by eGangotri

ಹುಲಿ

ಮುಂದಿನ ಕಾಲುಗಳು ಕಂಬದೋಪಾದಿಯಲ್ಲಿ ಬಹಳ ಗಟ್ಟಿಯಾಗಿರುತ್ತವೆ. ಮುಂದಿನ ಕಾಲಿನಲ್ಲಿ ಐದು ಉಗುರುಗಳೂ ಹಿಂದಿನ ಕಾಲಿನಲ್ಲಿ ನಾಲ್ಕು ಉಗುರುಗಳೂ ಒಟ್ಟು 18 ಉಗುರುಗಳು ಹುಲಿ ಜಾತಿಯ ಸಾಧಾರಣ ಸಂಖ್ಯೆ. ಇಪ್ಪತ್ತು ಉಗುರುಗಳಿರುವುದು ಅಪೂರ್ವ. ಹುಲಿಯ ಶಕ್ತಿ ಅದರ ಮುಂದಿನ ಎರಡು ಪಂಜಗಳಲ್ಲಿ. ಪ್ರಾಣಿಗಳನ್ನು ಹಿಡಿಯುವುದಕ್ಕೂ ಮತ್ತು ಅವುಗಳನ್ನು ದುರ್ಬಲ ಪಡಿಸುವುದಕ್ಕೂ ಈ ಪಂಜಗಳು ಉಪಯೋಗಿಸಲ್ಪಡುತ್ತವೆ. ಈ ಪಂಜಗಳ ಶಕ್ತಿ ಎದುರಾಳಿಯ ಮೇಲಕ್ಕಪ್ಪಳಿಸುವುದರಲ್ಲಿ ಅಪಾರವಾದುದು ಮತ್ತು ಅಗಾಧವಾದುದು. ಹುಲಿಯು ತನ್ನ ಬಲಿಯನ್ನು ತೆಗೆಯುವುದು ಮತ್ತು ಆಕ್ರಮಿಸುವುದು ಯಾವಾಗಲೂ ಹಿಂದಿನಿಂದ ಮತ್ತು ಕುತ್ತಿಗೆಯ ಕೆಳಗಿನಿಂದ. ತನ್ನ ಆಕ್ರಮಣ ಪ್ರಾಣಿಯ ಮುಖ್ಯ ರಕ್ತನಾಳವನ್ನು ಕೋರೆಹಲ್ಲುಗಳಿಂದ ಕೊರೆಯುವುದರ ಮುಖಾಂತರ ಆಕ್ರಮಣವನ್ನು ಪ್ರಜ್ಞಾಶೂನ್ಯವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri


ಮಾಡುತ್ತದೆ. ಅನೇಕ ಸಾರಿ ಪ್ರಾಣಿಗಳ ಬಿಸಿರಕ್ತದಿಂದಲೇ ಒಂದೆರಡು ದಿವಸಗಳು ಹುಲಿಯು ತನ್ನ ಹಸಿವು, ಬಾಯಾರಿಕೆಗಳನ್ನು ನೀಗಿಸಿಕೊಳ್ಳುತ್ತದೆ. ಅಂತೆಯೇ ಹುಲಿ ಆಹಾರವಿಲ್ಲದೆ ದಿನಗಟ್ಟಲೆ ಉಪವಾಸವನ್ನೂ ಆಚರಿಸಬಲ್ಲುದು. ಹುಲಿಯ ತನ್ನ ಬೀಳಿನ ಮೇಲೆ ಎರಗಿರುವಾಗ ಅದನ್ನು ಕೆಣಕುವುದು ಸಾವಿನ ದವಡೆಯನ್ನು ಹೊಕ್ಕಹಾಗೆ. ಹುಲಿಯ ಅಂಗಾಲಿನ ಮೆದು ಮಾಂಸದ ಮುದ್ದೆಗಳು ಹುಲಿಯು ತನ್ನ ಬೀಳನ್ನು ಅಪ್ಪುವಾಗ ನಿಶ್ಶಬ್ದತೆಗೆ ಬಹಳ ಸಹಕಾರಿ. ಹುಲಿಯು ನಡೆಯುವಾಗ ಬಳಕುವ ಪುತ್ತು ಓಡುವಾಗ ಚಿಮ್ಮುವ ಶರೀರದ ನೋಟ ಮನತಣಿಯುವಂಥದು.

ಹುಲಿಯು ಸಾಮಾನ್ಯವಾಗಿ ಉಷ್ಣಪ್ರದೇಶ ವಾಸಿ. ಸಮಭಾಜಕ ವೃತ್ತದ ಇಕ್ಕೆಲಗಳಲ್ಲಿಯೂ ಸಮಶೀತೋಷ್ಣ ವಲಯಗಳವರೆಗೂ ಕಂಡುಬರುತ್ತದೆ. ಇಂಡಿಯಾ ದೇಶದ ಹಿಮಾಲಯ ಪ್ರದೇಶ ಹೊರತು ಹೆಚ್ಚು ಕಡಿಮೆ ಉಳಿದೆಲ್ಲಾ ಕಡೆಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ. ದಕ್ಷಿಣ ಇಂಡಿಯಾದ ಹುಲಿ, ಬಂಗಾಳದ ಹುಲಿ, ಮಧ್ಯಪ್ರದೇಶದ ಹುಲಿ, ಅಸ್ಸಾಮಿನ ಹುಲಿಯೆಂದು ಮೈಮೇಲಿನ ಕೂದಲು ಛಾಯೆಯಿಂದ ಗುರುತಿಸುತ್ತಾರೆ. ಅಂದರೆ ದಟ್ಟ ಕಾಡಿನಲ್ಲಿ ಹೆಚ್ಚು ನೆರಳಿನಲ್ಲಿ ಬೆಳೆದ ಹುಲಿಗಳು ಸಾಧಾರಣ ಕಪ್ಪು ಛಾಯೆಯುಳ್ಳವೆಂದು ನಂಬಿಕೆ. ಅಂತೆಯೇ ಕುರುಚಲು ಕಾಡಿನಲ್ಲಿ ವಾಸಿಸುವ ಹುಲಿ ಗಾತ್ರದಲ್ಲಿ ಚಿಕ್ಕವೆಂದೂ ಹೆಚ್ಚು ಕ್ರೂರ ಸ್ವಭಾವದವುಗಳೆಂದೂ ಗಣನೆ. ಗಂಡು ಮತ್ತು ಹೆಣ್ಣು ಹುಲಿಗಳೆರಡಕ್ಕೂ ಗಾತ್ರದಲ್ಲಿ ಅಷ್ಟೊಂದು ವ್ಯತ್ಯಾಸವಿಲ್ಲ. ಬಲಿತ ಗಂಡು ಹುಲಿಗೆ ತಲೆ ಬುರುಡೆ ಕೊಂಚ ದಪ್ಪ ಮತ್ತು ಮುಂದಿನ ಕಾಲಿನ ಪಾದದ ಆಕಾರ ಕೊಂಚ ವ್ಯತ್ಯಾಸ.

ಹುಲಿಗಳು ಒಂಟೊಂಟಿಯಾಗಿಯೂ ಸಣ್ಣ ಕುಟುಂಬವಾಗಿಯೂ ವಾಸಿಸುತ್ತವೆ. ವಯಸ್ಸಿಗೆ ಬಂದ ಮರಿಗಳು ತಾವಾ

Sri Vidyabharathi Book Centre, Sringeri

CC-O. In Public Domain. Digitized by eGangotri



ಗಿಯೇ ತಂದೆತಾಯಿಗಳನ್ನು ನೀಗುತ್ತವೆ. ಬೆದೆ ಕಾಲದಲ್ಲಿ ಹೆಣ್ಣು ಗಂಡು ಕೂಡಿ ವಾಸಿಸುತ್ತವೆ. ಉಳಿದಕಾಲಗಳಲ್ಲಿ ಗಂಡು ಹೆಣ್ಣು ಕೂಡಿ ಬಾಳುವುದು ಅಪರೂಪ. ಹುಲಿ ತನ್ನದೇ ಆದ ಒಂದು ಗೊತ್ತು ವಲಯವನ್ನು ಹೊಂದಿರುತ್ತದೆ. ಈ ವಲಯ ಪ್ರದೇಶ ಗಳಿಗೆ ಮತ್ತೊಂದರ ಪ್ರವೇಶವಿಲ್ಲವೆಂದಲ್ಲ. ಬೆದೆ ಕಾಲಗಳಲ್ಲಿ, ಹೊಟ್ಟೆಗೆ ತೊಂದರೆಯಾದ ಬರಗಾಲಗಳಲ್ಲಿ ತಮ್ಮ ಹದ್ದುಮೀರಿ ಚಲಿಸುವುದುಂಟು. ಆಹಾರ ನೀರುಗಳನ್ನು ಹುಡುಕಿಕೊಂಡು ಮೈಲಿಗಟ್ಟಲೆ ಹುಲಿಗಳು ನಡೆಯುವುದುಂಟು. ತೃಷೆ ಬಾಯಾರಿಕೆ ನೀಗುವ ದೆಸೆಯಲ್ಲಿ ರಾತ್ರಿಗಟ್ಟಲೆ ನಿದ್ರೆ ಮಾಡದ ಸಂದರ್ಭಗಳು ಕಂಡುಬಂದಿವೆ. ಹುಲಿ ಕಾಡಿನಲ್ಲಿ ಹೊರಟಿತೆಂದರೆ ತಮ್ಮದೇ ಆದ ಶಬ್ದಗಳ ಮೂಲಕವೋ, ಆ ದಾರಿ ಬಿಟ್ಟು ಜಿಗಿಯುವುದರ ಮೂಲಕವೋ ಆ ವಲಯದಲ್ಲಿ ವಾಸಿಸುವ ಮಿಕ್ಕ ಪ್ರಾಣಿಗಳು ತಮ್ಮ ಭಯವನ್ನೋ ಯಾ ಗೌರವವನ್ನೋ ಪ್ರದರ್ಶಿಸುವುದು ಪಳಗಿದ ಅರಣ್ಯವಾಸಿಗಳಿಗೆ ಮತ್ತು ಸಂಚಾರಿಗಳಿಗೆ ಅನುಭವ. ಹುಲಿಯ ಶಬ್ದವನ್ನು ಕೇಳಿ ಸನ್ನಿವೇಶವನ್ನು ಅರಿಯುವುದು ಅರಣ್ಯವಾಸಿಗಳಿಗೆ ಸುಲಭದ ಕಾರ್ಯ. ದಟ್ಟ ಕಾಡುಗಳಲ್ಲಿ ಹುಲಿಯು ಕೋಪದಿಂದ ಗರ್ಜಿಸಿದರೆ ಯಾವ ಮನುಷ್ಯನಿಗೂ ಅಥವಾ ಪ್ರಾಣಿ ಗಳಿಗೂ ಎದೆ ಬಡಿಯುವುದು ಸಾಮಾನ್ಯ. ಹುಲಿಯ ಜೊತೆಯಲ್ಲಿ ಹೋರಾಡಿ ತಪ್ಪಿಸಿಕೊಂಡವರಿದ್ದಾರೆ, ಮಡಿದವರಿದ್ದಾರೆ. ತಪ್ಪಿಸಿ ಕೊಂಡರೆ ಪುನರ್ಜನ್ಮವೆತ್ತಿದ ಹಾಗೆಯೇ.

ಪ್ರಕೃತಿ ನಿಯಮದಂತೆ ಯಾವ ಕ್ರೂರ ಪ್ರಾಣಿಯ ಸಂತತಿಯೂ ಕೂಡ ನಿಚ್ಚಳವಾಗಿ ಹೆಚ್ಚುವುದಿಲ್ಲ. ಅಂತೆಯೇ ಹುಲಿಯ ಸಂಖ್ಯೆಯೂ ಕೂಡ ಯಾವ ದೇಶ ಪ್ರದೇಶ ವಲಯ ಗಳಲ್ಲಿ ಹದ್ದುಮೀರಿ ಏರುವುದಿಲ್ಲ. ವಯಸ್ಸಿಗೆ ಬಂದ ಹುಲಿ (3–4 ವರ್ಷಗಳಲ್ಲಿ) ಹೆಣ್ಣಾಗಲೆ ಗಂಡಾಗಲೆ ಎಷ್ಟಿದ್ದಾದರೂ ಪ್ರತಿ

Sri Vidyabharathi Book Centre, Sringeri

CC-O. In Public Domain. Digitized by eGangotri


ವರ್ಷವೂ ಹಡೆಯುವುದು ವಿರಳ. ಹಡೆದರೂ ಸಂತತಿ ಉಳಿಯುವುದು ಇನ್ನೂ ವಿರಳ. ಹುಲಿ ಒಂದು ಸಾರಿಗೆ 5 ಮರಿಗಳವರೆಗೂ ಹಡೆಯಬಲ್ಲದು. 2–3 ಸಾಮಾನ್ಯ. ಹಡೆದುದೆಲ್ಲವೂ ಬದುಕುವುದು ದುರ್ಲಭ. ಅನೇಕ ವೇಳೆ ಹಡೆದ ತಾಯಿ ತಪ್ಪಿದಲ್ಲಿ ತಂದೆಯ ಬಾಯಿಗೆ ತುತ್ತಾಗಬೇಕಾಗುತ್ತದೆ. ಅನೇಕ ವನ್ಯ ಜಾತಿಯ ಪ್ರಾಣಿಗಳಲ್ಲಿ ಅದರ ಸಂತತಿಗೆ ಭಯವಿರುವುದು ಅನ್ಯ ಪ್ರಾಣಿಗಳಿಂದ. ಈ ಮೃಗರಾಜನ ವಿಷಯದಲ್ಲಿ ತನ್ನ ಜಾತಿಯಿಂದಲೇ ಸಂತತಿಯ ಹೆಚ್ಚಳಿಕೆಗೆ ಮೂಲ.ಅದರಲ್ಲೂ ತನ್ನ ಜೀವದಾತರುಗಳಿಂದಲೇ ಮತ್ತೂ ಭಯ. ಹುಲಿ ಕಲ್ಲು ಅಥವಾ ಮರದ ಪೊಟರೆಗಳಲ್ಲಿ ಅನ್ಯಪ್ರಾಣಿಗಳಿಗೆ ಅಭೇದ್ಯ ಸ್ಥಳಗಳಲ್ಲಿ ಮರಿಗಳನ್ನು ಇಡುತ್ತದೆ. ಹುಲಿಗೆ ಬಸಿರು ಸಾಮಾನ್ಯವಾಗಿ $3\frac{1}{2}$ ತಿಂಗಳು. ಉಳಿದ ಮಾಂಸಾಹಾರಿ ಪ್ರಾಣಿಗಳಂತೆ 25 ವರ್ಷ ಆಯಸ್ಸು. ಕಾಡಿನಲ್ಲಿ ಆಯಸ್ಸು ತುಂಬಿ ಸತ್ತ ಹುಲಿಗಳನ್ನು ನೋಡಿದ ಮಾನವರು ಅಪರೂಪ. ಕಾಡುಹಂದಿ, ಕರಡಿಗಳೊಡನೆ ಹೋರಾಡಿ ಸತ್ತ ಹುಲಿಯನ್ನು ನೋಡಿದವರಿದ್ದಾರೆ. ಮರಿ ಆನೆಗಳಿಗೆ ಹುಲಿಯಿಂದ ಅಪಾಯವುಂಟು. ಹುಲಿ ಮತ್ತು ಆನೆಗಳು ವೈರತ್ವವನ್ನು ಸಾಧಿಸುವುದು ಕಾಡಿನಲ್ಲಿ ಅಪರೂಪ. ಹುಲಿಯು ಬೇಟೆಯಾಡುವಾಗ ತನ್ನ ಬಲಿಯನ್ನು ಅಪ್ಪಳಿಸುವುದು ಒಂದು ಅಪೂರ್ವ ದೃಶ್ಯ. ಬಲಿಯನ್ನು ಸಮೀಪಿಸುವವರೆಗೂ ನೆಲವನ್ನಪ್ಪಿ, ನಿಶ್ಶಬ್ದತೆಯನ್ನು ಕಾಪಾಡಿ ಮರದ ತುಂಡಿನ ಆಕಾರದಲ್ಲಿ ತವೆದು ಸಮೀಪಿಸಿದ ಕ್ಷಣಮಾತ್ರದಲ್ಲಿ ತನಗಿಂತ ದೊಡ್ಡ ಪ್ರಾಣಿಯಾದಲ್ಲಿ ಛಂಗನೆ ಕತ್ತಿನ ಮೇಲೆ ಹಾರಿ ಮುಂದಿನ ಕಾಲುಗಳಿಂದ ಬಲಿಯ ಎರಡು ಮುಂದಿನ ಕಾಲುಗಳನ್ನೂ ಅಡ್ಡ ಹಾಕಿ ಬಿಗಿದು ತನ್ನ ಬಾಯಿಯನ್ನು ಬಲಿಯ ಕತ್ತಿನ ಕೆಳಭಾಗಕ್ಕೆ ಚಾಚಿ ಉಸಿರುಕಟ್ಟಿಸಿ ಪ್ರಾಣಿಯನ್ನು ಜಾನ್ಲ್ಞಶೂನ್ಯವಾಗಿ ಮಾಡಿಕೊಂಡು ಕ್ರಮವಾಗಿ ಕೆಳಕ್ಕುರುಳಿಸಿ

Sri Vidyabharathi Book Centre, Shingeri

CC-O. In Public Domain. Digitized by eGangotri


ಆದನ್ನು ಭಕ್ಷಿಸುತ್ತದೆ. ಬಲಿಯು ಸಣ್ಣದಾದಲ್ಲಿ ತನ್ನ ಮುಂದಿನ ಕಾಲಿನ ಪಂಜಗಳ ಬಡಿತದಿಂದಲೇ ಜ್ಞಾನಶೂನ್ಯಮಾಡಿ ಕೊಂದು ತಿನ್ನುತ್ತದೆ. ಹುಲಿಯು ಸಾಯಿಸಿದ ಯಾವ ಪ್ರಾಣಿಯನ್ನೂ, ಹುಲಿಯು ತಿಂದು ಸ್ಥಳವನ್ನು ಬಿಟ್ಟುಹೊರಡುವ ತನಕ ಮತ್ತಾವ ಪ್ರಾಣಿಯೂ ಆಕ್ರಮಿಸಲು ಸಾಧ್ಯವಿಲ್ಲ. ಅನೇಕ ವೇಳೆ 2, 3 ದಿವಸಗಳು ಬಲಿಯನ್ನು ತಿಂದು ತೇಗಿ ಆದರ ಬಳಿಯೇ ಕಾಲ ಕಳೆಯುತ್ತದೆ. ಈ ಕಾರ್ಯದಲ್ಲಿ ಒಂಟಿ ಹುಲಿಯಾಗಲೀ, ಕುಟುಂಬವಾಗಲೀ ರೀತಿಯೊಂದೇ. ಮರಿಗಳಿಗೆ ಬಲಿಯನ್ನೆರಗುವುದು, ತಿನ್ನುವುದು, ಮೊದಲಾದ ಮೂಲಪಾಠವನ್ನು ಕಲಿಸುವುದು ಅನೇಕ ವೇಳೆ ಹೆಣ್ಣು ಹುಲಿ. ಸಮಯವೊದಗಿದಾಗ ಮಾತ್ರ ಗಂಡು ಹುಲಿ ನೆರವಿಗೆ ಬರುತ್ತದೆ.

ಕಾಲುಮೇಲೆ ನಡೆದು ಹುಲಿಯನ್ನು ಬೇಟೆಯಾಡುವುದು ಒಂದು ಶೌರ್ಯದ ಕೆಲಸ. ಹೀಗೆ ಬೇಟೆಯಾಡುವವರು ಅತಿ ವಿರಳ. ಈಗಿನ ಕಾಲದಲ್ಲಿ ವಾಹನಗಳ ಆಸರೆಯಲ್ಲಿ ತಲೆಯಿಂದ ಕಾಲಿನ ವರೆಗೆ ಬಚ್ಚಿಟ್ಟುಕೊಂಡು ಬೇಟೆಯಾಡುವ ತಲೆಹೋಕರ ಸಂಖ್ಯೆ ಹೆಚ್ಚುತ್ತಿದೆ. ಈ ಕಾರಣದಿಂದ ಹುಲಿಯ ಸಂತತಿ ಕುಗ್ಗುತ್ತಿದೆ. ಇತ್ತೀಚೆಗೆ ಹುಲಿಯ ಸಂತತಿ ಅಭಿವೃದ್ಧಿ ಮತ್ತು ಪೋಷಣೆಗಳ ಹೆಸರಿನಲ್ಲಿ ಅನೇಕ ಸ್ಥಳಗಳನ್ನು ಗುರುತಿಸಿ ಇಂಡಿಯಾ ಸರಕಾರದವರು ಅನೇಕ ಉಚಿತ ಕ್ರಮಗಳನ್ನು ಕೈಗೊಂಡಿದ್ದಾರೆ. ಇತ್ತೀಚಿನ ಮಾಹಿತಿಯ ಪ್ರಕಾರ ಹುಲಿಯ ಸಂಖ್ಯೆ ದೇಶದ ಅನೇಕ ಭಾಗಗಳಲ್ಲಿ ಹೆಚ್ಚುತ್ತಿರುವ ಸಂಗತಿ ಹರ್ಷದಾಯಕ ಮತ್ತು ಸ್ತುತ್ಯರ್ಹ.

**ಜಿಂಕೆ**

ನಾಗರಹೊಳೆ ಮತ್ತು ಬಂಡಿಪುರ ಪ್ರದೇಶದಲ್ಲಿ ಸರ್ವ ಸಾಮಾನ್ಯವಾಗಿ ಗುಂಪು ಗುಂಪಾಗಿ ಚಲಿಸುತ್ತಾ ಪ್ರವಾಸಿಗಳ ಕಣ್ಮನಗಳನ್ನು ಸೆಳೆಯುವ ಪ್ರಾಣಿ ಜಿಂಕೆ. ಜಿಂಕೆಗಳು ಹಿಂಡು

Sri Vidyabharathi Book Centre, Sringeri

CC-O. In Public Domain. Digitized by eGangotri



ಜಿಂಕೆ

ಹಿಂಡಾಗಿ ಚಲಿಸುತ್ತಾ ರಾತ್ರಿಯ ವೇಳೆಯಲ್ಲಿ ನೂರಾರು ಪ್ರಾಣಿಗಳು ಗುಂಪುಗೂಡಿ ನಾಗರಹೊಳೆ ಮತ್ತು ಬಂಡೀಪುರ ಪ್ರದೇಶದಲ್ಲಿ ಅರಣ್ಯ ಕುಟೀರಗಳ ಹತ್ತಿರ ಮಲಗಿ ನಿದ್ರಿಸುವುದನ್ನು ಪ್ರವಾಸಿಗಳು ಕಂಡಿರುತ್ತಾರೆ.

ಜಿಂಕೆಯು ಕಂದು ಬಣ್ಣದ್ದಾಗಿದ್ದು ಬಿಳಿ ಚುಕ್ಕೆಯನ್ನು ಹೊಂದಿರುತ್ತದೆ. ಹೊಟ್ಟೆಯ ಭಾಗದಲ್ಲಿ ಬೆಳ್ಳಗಿರುತ್ತದೆ. ಗಂಡು ಜಿಂಕೆಗೆ 18 ತಿಂಗಳು ವಯಸ್ಸಾದನಂತರ ಕೊಂಬು ಬೆಳೆಯಲು ಪ್ರಾರಂಭವಾಗುತ್ತದೆ. ಈ ಕೊಂಬು ಪೂರ್ತಿ ಬೆಳೆದು ನಿಂತಾಗ ಎರಡು–ಮೂರು ರೆಂಬೆ ಕವಲು ಒಡೆದಿರುತ್ತದೆ. ಈ ಕೊಂಬು ಜೀವನದಲ್ಲಿ ಹಲವು ಬಾರಿ ಬೀಳುವುದುಂಟು. ಇದು ಬಿದ್ದ ಮೇಲೆ ಹೊಸ ಕೊಂಬುಗಳು ಬೆಳೆಯುತ್ತವೆ. ಈ ಕೊಂಬುಗಳು ಯಾವ ಒಂದು ನಿರ್ದಿಷ್ಟ ಸಮಯವೂ ಇಲ್ಲದಂತೆ ಬೀಳುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri


ಜಿಂಕೆಯ ಜೀವನದಲ್ಲಿ ಅವು ಎಷ್ಟು ಬಾರಿ ಬೀಳುತ್ತವೆ ಎಂಬುದು ಇನ್ನೂ ನಿಖರವಾಗಿ ತಿಳಿದಿಲ್ಲ. ಸುಮಾರು 4–6 ಬಾರಿ ಬಿದ್ದು ಹುಟ್ಟುವುದೆಂದು ತಿಳಿದುಬರುತ್ತದೆ. ಕೊಂಬಿನ ಒಳಗೆ ಯಾವ ತರಹ ಟೊಳ್ಳು ಇಲ್ಲದೆ ಗಟ್ಟಿಯಾಗಿರುತ್ತದೆ. ಹೊಸದಾಗಿ ಹುಟ್ಟಿದ ಕೊಂಬನ್ನು ವೆಲ್‌ವೆಟ್ ಮಾದರಿಯ ಚರ್ಮ ಮತ್ತು ಕೂದಲು ಸುತ್ತುವರೆದಿರುತ್ತದೆ. ಕೊಂಬು ಬಲಿತ ಹಾಗೆ ಕೂದಲೂ ಉದುರಿ ಕೊಂಬು ಗಟ್ಟಿಯಾಗುತ್ತದೆ. ಬಿದ್ದ ಕೊಂಬನ್ನು ಕುಶಲ ಕೆಲಸಗಾರರು ತಮ್ಮ ಕುಶಲ ಕೈಗಾರಿಕೆಯಲ್ಲಿ ಉಪಯೋಗಿಸುತ್ತಾರೆ. ಒಳಗಿರುವ ಬಿಳುಪು ಕೊಂಬನ್ನು ಕೊಯ್ದು ಅದನ್ನು ಕೆತ್ತನೆಯ ಚಿತ್ರ ಕೊರೆತದಲ್ಲಿ ಆನೆಯ ದಂತದ ಬದಲು ಉಪಯೋಗಿಸುತ್ತಾರೆ. ಇದು ದಂತದ ಹಾಗೆ ನಯವಾಗಿಯೂ, ಗಟ್ಟಿಯಾಗಿಯೂ ಇರುವುದರಿಂದ ಚೆನ್ನಾಗಿ ಬಾಳಿಕೆ ಬರುತ್ತದೆ.

## ನವಿಲು

ನವಿಲು ಬಣ್ಣದ, ಬೆಡಗಿನ, ಬಿನ್ನಾಣದ ಪಕ್ಷಿ. ಇದಕ್ಕಿಂತ ಸುಂದರವಾದ ಪಕ್ಷಿ ನಮ್ಮ ದೇಶದಲ್ಲಿ ಮತ್ತೊಂದಿಲ್ಲ. ಆದುದರಿಂದಲೇ ನವಿಲನ್ನು ನಮ್ಮ ರಾಷ್ಟ್ರಪಕ್ಷಿಯೆಂದು ಘೋಷಿಸಲಾಗಿದೆ. ಗಂಡು ನವಿಲಿಗೆ ಸುಮಾರು 3–4 ಅಡಿ ಉದ್ದದ ಪುಕ್ಕವಿದ್ದು ಅದು ಗರಿಗೆದರಿ ಆಡುವಾಗ ಅತ್ಯಂತ ಆಕರ್ಷಣೀಯವಾಗಿರುತ್ತದೆ. ಈ ಪುಕ್ಕದ ಗರಿಗಳು ಮಳೆಗಾಲದಲ್ಲಿ ಬಿದ್ದುಹೋಗಿ ಅಡಚಣೆಯಿಲ್ಲದೆ ಸುಗಮವಾಗಿ ಓಡಾಡಿಕೊಂಡಿರಲು ಸಹಾಯವಾಗುತ್ತವೆ. ಮಳೆ ಗಾಲ ನಿಂತ ಮೇಲೆ ಗರಿಗಳು ಬೆಳೆದು ಬೇಸಿಗೆ ಸಮಯಕ್ಕೆ ಪೂರ್ತಿ ಬೆಳೆದು ಅತ್ಯಂತ ಮನೋಹರವಾಗಿ ಎದ್ದು ಕಾಣುತ್ತವೆ. ಗುಂಪಿನಲ್ಲಿ ಒಂದು ಗಂಡು ನವಿಲಿನ ಜೊತೆಗೆ 5–6 ಹೆಣ್ಣು ನವಿಲುಗಳು ಓಡಾಡಿಕೊಂಡಿರುತ್ತವೆ. ನವಿಲು ಮೊಟ್ಟೆಗಳನ್ನು ನೆಲದ

Sri Vidyabharathi Book Centre, Sringeri

CC-O. In Public Domain. Digitized by eGangotri



ನವಿಲು



Sri Vidyabharathi Book Centre, Sringeri

CC-O. In Public Domain. Digitized by eGangotri



ಮೇಲೆ ಗೂಡಿನಲ್ಲಿಟ್ಟು ಮರಿ ಮಾಡುತ್ತದೆ. ತಾಯಿಯ ಹಿಂದೆ 3 ರಿಂದ 5 ಮರಿಗಳು ಓಡಾಡಿಕೊಂಡಿರುತ್ತವೆ. ಹೆಣ್ಣು ನವಿಲಿಗೆ ತಲೆಯಲ್ಲಿ ಗಂಡಿನಂತೆ ಕಿರೀಟವಿರುತ್ತದೆ. ಆದರೆ ಹೆಣ್ಣು ನವಿಲ ಕಿರೀಟ ಸಣ್ಣ ಪ್ರಮಾಣದ್ದು. ನವಿಲು ಬಹಳ ಸೂಕ್ಷ್ಮಗ್ರಾಹಿಯಾಗಿದ್ದು ಸಂಶಯ ಬಂದ ಕೂಡಲೇ ಕಾಲು ಕಿತ್ತು ಓಡುತ್ತವೆ. ಸಮಯ ಮತ್ತು ಸ್ಥಳಾವಕಾಶ ಸಿಕ್ಕಿದಾಗ ರೆಕ್ಕೆ ಬಿಚ್ಚಿ ಹಾರಿ ಮರದ ಕೊಂಬೆಯ ಆಶ್ರಯವನ್ನು ಸೇರುತ್ತವೆ. ಇವು ಸಾಧಾರಣವಾಗಿ ಒಂದೇ ಸಾಲಿನಲ್ಲಿ ಒಂದರ ಹಿಂದೆ ಒಂದು ನಡೆದು ಬರುತ್ತವೆ.

**ಕಾಡುಕೋಣ**

ಆರ್ಟಿಯೋಡ್ಯಾಕ್ಟೈಲ ಗಣದ ಬೋವಿಡಿ ಕುಟುಂಬಕ್ಕೆ ಸೇರಿದ ಸ್ಥೂಲಕಾಯದ ಪ್ರಾಣಿ. ನೋಡುವುದಕ್ಕೆ ದೊಡ್ಡ ಕೋಣನಂತೆ ಕಾಣುವುದು. ಭಾರತದಲ್ಲಿ ಕಾಣಬರುವ ಕಾಡು ಕೋಣ ಬಾಸ್‌ಗೌರಸ್ ಜಾತಿಗೆ ಸೇರಿದುದು. ಇದಕ್ಕೆ ಗೌರ್ ಎಂಬ ಹೆಸರೂ ಇದೆ.

ಸುಮಾರು 750–1800 ಮೀಟರ್ ಎತ್ತರದ ಗುಡ್ಡಗಾಡು ಪ್ರದೇಶಗಳಲ್ಲಿ ಗುಡ್ಡಗಳ ಮೇಲೆ ಹುಲ್ಲುಗಾವಲಿನಂತಹ ಸ್ಥಳಗಳಲ್ಲಿ ಸಾಮಾನ್ಯವಾಗಿ ವಾಸಿಸುತ್ತವೆ. ಕರ್ನಾಟಕದ ಮಲೆನಾಡುಗಳಲ್ಲಿ ಹಿಂದೊಮ್ಮೆ ಹೇರಳವಾಗಿದ್ದ ಕಾಡುಕೋಣಗಳನ್ನು, ಈಗ ಬಿಳಿಗಿರಿರಂಗನ ಬೆಟ್ಟ, ಬಂಡೀಪುರ ಅಭಯಾರಣ್ಯ, ಲಕ್ಕವಳ್ಳಿ, ದಾಂಡೇಲಿ ಹಾಗೂ ನಾಗರಹೊಳೆಗಳಲ್ಲಿ ಮಾತ್ರ ಕಾಣಬಹುದಾಗಿದೆ.

ಪೂರ್ಣ ಬೆಳೆದ ಕೋಣ ಸುಮಾರು ಹತ್ತು ಅಡಿ ಉದ್ದ, ಆರು ಅಡಿ ಎತ್ತರ ಇದ್ದು ಒಂದು ಟನ್‌ಗಿಂತಲೂ ಹೆಚ್ಚು ತೂಗುತ್ತದೆ. ದೇಹದ ಬಣ್ಣ ಕಪ್ಪುಮಿಶ್ರಿತ ಕಂದು. ಕಾಲುಗಳು ಮಾತ್ರ ಬೆಳ್ಳಗಿವೆ. ಮೈಮೇಲೆ ಮೃದುವಾದ ರೇಷ್ಮೆಯಂಥ ಕೂದಲು

Sri Vidyabharathi Book Centre, Sringeri

CC-O. In Public Domain. Digitized by eGangotri



ಕಾಡುಕೋಣ

Sri Vidyabharathi Book Centre, Sringeri

CC-O. In Public Domain. Digitized by eGangotri



ಗಳಿವೆ. ಹೆಗಲಿನಿಂದ ಬೆನ್ನಿನ ಮಧ್ಯದವರೆಗೂ ಎತ್ತರವಾದ ಏಣಿ ಇದೆ. ತಲೆಯ ಮೇಲೆ ಅಗಲವಾಗಿ ಹರಡಿರುವ ಬಲವಾದ ಚೂಪು ತುದಿಯ ಸೊಗಸಾದ ಕೊಂಬುಗಳಿವೆ. ಸಾಮಾನ್ಯವಾಗಿ 5–20 ಪ್ರಾಣಿಗಳನ್ನೊಳಗೊಂಡ ಹಿಂಡಿನಲ್ಲಿ ಸಂಚರಿಸುತ್ತದೆ. ಸಂಜೆ ಮತ್ತು ಮುಂಜಾನೆಯ ಮಬ್ಬುಗತ್ತಲಿನಲ್ಲಿ ಹುಲ್ಲು, ಚಿಗುರು ಮುಂತಾದುವನ್ನು ತಿನ್ನುತ್ತಾ ತಿರುಗಾಡುತ್ತದೆ. ಹಗಲಲ್ಲಿ ದಟ್ಟವಾದ ಪೊದೆಗಳ ನೆರಳಿನಲ್ಲಿ ಬಿಸಿಲಿನ ತಾಪದಿಂದ ದೂರವಿದ್ದು ಆಹಾರವನ್ನು ಮೆಲುಕು ಹಾಕುತ್ತಾ ವಿಶ್ರಮಿಸುತ್ತದೆ. ಸಾಧುಸ್ವಭಾವದ ಪ್ರಾಣಿ. ಆದರೆ ಗಾಯಗೊಂಡಾಗ, ಶತ್ರುಗಳು ಹಿಂಬಾಲಿಸಿದಾಗ ಕ್ರೂರವಾಗಿ ಹೋರಾಡಬಲ್ಲುದು. ಸಾಧಾರಣವಾಗಿ ಶತ್ರುವಿನ ಸುಳಿವು ಸಿಕ್ಕಾಗ ಮರಗಿಡಗಳ, ಮೆಳೆಗಳ ನಡುವೆ ವೇಗವಾಗಿ ಓಡುತ್ತದೆ.

ಇದರ ಸಂತಾನೋತ್ಪತ್ತಿಯ ಕಾಲ ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳು. ಒಂದು ಸಲಕ್ಕೆ ಒಂದೇ ಮರಿ ಹುಟ್ಟುತ್ತದೆ.

## ವೃಕ್ಷಸಂಪತ್ತು

### ಶ್ರೀಗಂಧ

ಶ್ರೀಗಂಧದ ಮರವು ಪ್ರಪಂಚದಾದ್ಯಂತ ತನ್ನ ಪರಿಮಳಕ್ಕೆ ಖ್ಯಾತಿಯನ್ನು ಪಡೆದಿದೆ. ಈ ಮರವು ಸಮುದ್ರಮಟ್ಟದಿಂದ 2000ದಿಂದ 4500 ಅಡಿಗಳ ಎತ್ತರದ ಪ್ರದೇಶಗಳಲ್ಲಿ ವಿವಿಧ ಮಣ್ಣು, ಮಳೆಗಳ ವಾತಾವರಣದಲ್ಲಿ ಬೆಳೆಯುತ್ತದೆ. ಈ ಮರದ ಒಂದು ವೈಶಿಷ್ಟ್ಯವೆಂದರೆ ಇದು ಬೇರೆ ಜಾತಿಯ ಮರಗಿಡಗಳ ಬೇರಿನ ಮೇಲೆ ತನ್ನ ಆಹಾರಕ್ಕಾಗಿ ಭಾಗಶಃ ಅವಲಂಬನೆ ಮಾಡುತ್ತದೆ. ಈ ಮರಕ್ಕೆ ಉತ್ತಮ ವಾತಾವರಣದಲ್ಲಿ (ಬುಡದಿಂದ 123ಮಿ. ಎತ್ತರದ ಜಿಲ್ಲೆಯಲ್ಲಿ) 100 ಕೆಂ.ಮಿ. ಸುತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri



ಅಳತೆಯ ಗಾತ್ರವಾಗಿ ಬೆಳೆಯಲು ಸುಮಾರು 30 ವರ್ಷ ಅವಧಿ ಬೇಕಾಗುತ್ತದೆ. ಈ ಮರದ ಕೆಚ್ಚು ಬಲಿತಾಗ ವ್ಯಾಪಾರ ದೃಷ್ಟಿಯಿಂದ ಲಾಭದಾಯಕ. ಹೀಗೆ ಬಲಿಯಲು ಮರಕ್ಕೆ ಸಾಧಾರಣ 25 ವರ್ಷಗಳಿಂದ 35 ವರ್ಷಗಳು ಬೇಕಾಗುವುವು.

ಈ ಮರದ ಕೆಚ್ಚು ಭಾಗ, ಕಾಂಡಭಾಗ ಮತ್ತು ಬೇರಿನಲ್ಲಿ ಗಂಧದ ಎಣ್ಣೆಯನ್ನು ತೆಗೆಯುತ್ತಾರೆ. ಶ್ರೀಗಂಧದ ಮರದ ಕಾಂಡವನ್ನು ಬಣ್ಣಕ್ಕನುಗುಣವಾಗಿ ಕೆಂಪು ಮತ್ತು ಬಿಳಿ ಎಂದು ಎರಡು ಭಾಗವಾಗಿ ವಿಂಗಡಿಸುತ್ತಾರೆ. ಅದರ ರಚನೆಯ ಆಧಾರದ ಮೇಲೆ ನವಿಲಕಣ್ಣಿನ ಗಂಧ ಮತ್ತು ನಾಗರಕಣ್ಣಿನ ಗಂಧ (ಅಂದರೆ ಮರದ ಮೇಲ್ಮೈ ರಚನೆ ಕೆತ್ತನೆ ಮಾಡಿದಾಗ ನವಿಲಿನ ಕಣ್ಣು ಮತ್ತು ನಾಗರಹಾವಿನ ಕಣ್ಣಿನ ಹಾಗೆ ತೋರುತ್ತದೆ) ಎಂದು ನಾಲ್ಕು ಜಾತಿಗಳಾಗಿ ವಿಂಗಡಿಸುತ್ತಾರೆ. ಶ್ರೀಗಂಧದ ಮರವು ಕರ್ನಾಟಕಕ್ಕೆ ಪ್ರಕೃತಿ ಮಾತೆಯ ವರವಾಗಿದೆ. ಭಾರತದ ಒಟ್ಟು ಉತ್ಪತ್ತಿಯಲ್ಲಿ 30 ಭಾಗ ಕರ್ನಾಟಕದಲ್ಲಿಯೇ ಸಿಕ್ಕುತ್ತದೆ. ಶ್ರೀಗಂಧದ ತೈಲವು ಪ್ರಪಂಚದಲ್ಲಿ ಅತಿ ಪರಿಮಳವಾದ ಸುಗಂಧ ದ್ರವ್ಯವಾಗಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಈ ತೈಲ ಪ್ರಪಂಚದಾದ್ಯಂತ ಜನಪ್ರಿಯವಾಗಿದೆ. ಮಧ್ಯಯುಗದ ಕಾಲಾನುಕ್ರಮಣಿಕೆಯಲ್ಲಿ ಪರ್ಷಿಯ, ಅರೇಬಿಯ, ಏಷ್ಯಾ ಮೈನರ್, ಈಜಿಪ್ಟ್, ಗ್ರೀಸ್ ಮತ್ತು ರೋಮ್ ದೇಶಗಳಿಗೆ ವರ್ತಕರು ಶ್ರೀಗಂಧದ ತೈಲವನ್ನು ಸಾಗಿಸುತ್ತಿದ್ದುದರ ಬಗ್ಗೆ ಉಲ್ಲೇಖವಿದೆ.

ಈ ಶತಮಾನದ ಎರಡನೆಯ ದಶಕದವರೆಗೂ ಕರ್ನಾಟಕದಿಂದ ಶ್ರೀಗಂಧದ ಮರದ ತುಂಡುಗಳು ಬೇರೆ ದೇಶಗಳಿಗೆ ಮುಖ್ಯವಾಗಿ ಜರ್ಮನಿಗೆ ರಫ್ತಾಗುತ್ತಿದ್ದವು. ಜರ್ಮನಿಯಲ್ಲಿ ಗಂಧದ ಮರದ ತುಂಡುಗಳಿಂದ ತೈಲವನ್ನು ತೆಗೆದು ವಿವಿಧ ದೇಶ

CC-O. Jayachamarajendra Book Trust, Mysuru. Digitized by eGangotri

CC-O. In Public Domain. Digitized by eGangotri



ಗಳಿಗೆ ಮಾರುತ್ತಿದ್ದರು. ಎರಡನೆಯ ಮಹಾಯುದ್ಧದ ಕಾರಣದಿಂದ ಇವುಗಳ ಮಾರಾಟ ನಿಂತುಹೋಯಿತು. ಅಂದು ಮೈಸೂರಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಗಂಧದ ಎಣ್ಣೆಯನ್ನು ತೆಗೆಯುವ ಯೋಜನೆಯನ್ನು ರೂಪಿಸಿ ಬೆಂಗಳೂರಿನಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿದರು. ಅದನ್ನು 1917 ರಲ್ಲಿ ಮೈಸೂರಿಗೆ ಸ್ಥಳಾಂತರಿಸಲಾಯಿತು. 1932 ರಲ್ಲಿ ಶಿವಮೊಗ್ಗದಲ್ಲಿ ಮತ್ತೊಂದು ಗಂಧದ ಎಣ್ಣೆ ಕಾರ್ಖಾನೆಯನ್ನು ಸ್ಥಾಪಿಸಲಾಯಿತು.

ಗಂಧದ ಎಣ್ಣೆಗೆ ಯೂರೋಪ್, ಅಮೆರಿಕ ಮತ್ತು ಅರಬ್ ದೇಶಗಳಿಂದ ಹೆಚ್ಚು ಬೇಡಿಕೆಯಿದೆ. ಗಂಧದ ಎಣ್ಣೆಯನ್ನು ಸುಗಂಧ ದ್ರವ್ಯಗಳ ಮತ್ತು ಮೈ ಸಾಬೂನಿನ ತಯಾರಿಕೆಯಲ್ಲಿ ಬಳಸಲಾಗುತ್ತಿದೆ. ಗಂಧದಿಂದ ಎಣ್ಣೆಯನ್ನು ತಯಾರಿಸಿ ಬರುವ ಗಂಧದ ಪುಡಿಯಿಂದ ಗಂಧದ ಕಡ್ಡಿಯನ್ನು ತಯಾರಿಸಿ ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಈ ಕೈಗಾರಿಕೆ ಸುಮಾರು 30 ಸಾವಿರ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದೆ. ಇದರಲ್ಲಿ ಶೇಕಡ 80 ಮಂದಿ ಮಹಿಳೆಯರು. ಇದಲ್ಲದೆ ಗಂಧದ ಮರವನ್ನು ಕೆತ್ತನೆ ಕೆಲಸಕ್ಕೆ ಉಪಯೋಗಿಸುತ್ತಾರೆ. ಮೈಸೂರು, ಬೆಂಗಳೂರು, ಸಾಗರ, ಸೊರಬ, ಕುಮಟ ಮತ್ತು ಕಾರವಾರದಲ್ಲಿ ಕುಶಲ ಕೆತ್ತನೆಗೆ ಗಂಧದ ಮರವನ್ನು ಬಳಸುತ್ತಿದ್ದು, ಇದರಿಂದ ಪ್ರಸಿದ್ಧರಾದ ಶಿಲ್ಪಿಗಳಾಗಿದ್ದಾರೆ. ಹಿಂದೂಗಳು ಮತ್ತು ಪಾರ್ಸಿಗಳು ಶ್ರೀಗಂಧವನ್ನು ಧಾರ್ಮಿಕ ಉಪಯೋಗಕ್ಕೆ ಬಳಸುತ್ತಾರೆ.

ಶ್ರೀಗಂಧದ ಮರವನ್ನು ಬೆಳೆಯುವುದು ಬಹಳ ಸುಲಭ. ಮಳೆಗಾಲದಲ್ಲಿ ಬೀಜವನ್ನು ಬಿತ್ತಿದರೆ ತಾನೇ ತಾನಾಗಿ ಬೆಳೆದು ಬರುತ್ತದೆ. ಈ ಗಿಡಕ್ಕೆ ತನ್ನ ಜೀವನದ ಪ್ರಾರಂಭ ದೆಸೆಯಲ್ಲಿ ಬೇರೊಂದು ಗಿಡದ ಆಸರೆ ಅವಶ್ಯಕವಾಗಿದೆ. ಕಾರಣ ವಿಜ್ಞಾನಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಗಳು ಅದನ್ನು ಪರಾವಲಂಬಿ ಗಿಡವರ್ಗಕ್ಕೆ ಸೇರಿಸಿದ್ದಾರೆ. ತನ್ನ ಅಸ್ತಿತ್ವಕ್ಕೆ ಸೀಮೇತಂಗಡಿ, ಬಂದರಿಕೆ, ಲಂಟಾನ ಮುಂತಾದ ಗಿಡ ಜಾತಿಯ ಬೇರಿನ ಆಸರೆಯನ್ನು ಅವಲಂಬಿಸಿ ಗಂಧದ ಗಿಡ ಮರ ವಾಗಿ ಬೆಳೆಯುತ್ತದೆ. ಬೀಜ ಮೊಳೆತು ಸಸಿಯಾಗಿ ಅದು ಯಾವು ದಾದರೂ ಮರಗಿಡಗಳ ಬೇರನ್ನು ಅವಲಂಬಿಸುವವರೆಗೂ ಅವರೆ, ತೊಗರಿ, ಹುರಳಿ ಮುಂತಾದ ಬೆಳೆಗಳ ಆಧಾರದಿಂದ ಅದನ್ನು ಬೆಳೆಸಬಹುದು. ಎಲ್ಲಿದ್ದರೂ ಗಂಧದ ಮರ ಸರಕಾರದ ಸೊತ್ತೆಂದು ಘೋಷಿಸಲಾಗಿದ್ದರೂ ಕೂಡ ಅದನ್ನು ಪೋಷಿಸಿ ಬೆಳೆ ಸಿದ ಜನರಿಗೆ ಈ ಮರವನ್ನು ತೆಗೆದಾಗ ಬರುವ ಆದಾಯದಲ್ಲಿ ಅರ್ಧ ಭಾಗವನ್ನು ಪ್ರೋತ್ಸಾಹಧನ (ಬೋನಸ್) ಆಗಿ ಸರಕಾರ ಕೊಡುತ್ತದೆ. ಇಷ್ಟೆಲ್ಲಾ ಆದರೂ ರಾಜಾಸ್ಥಾನದ ಚರಿತ್ರೆಯಲ್ಲಿ ಉಲ್ಲೇಖಿಸಿರುವ ರಾಣಿ ಪದ್ಮಿನಿಗೆ ತನ್ನ ರೂಪು ಕಂಟಕವಾದ ಹಾಗೆ ಈ ಗಂಧದ ಪರಿಮಳ ಕೂಡ ಗಂಧದ ಜಾತಿಗೆ ಕಂಟಕಪ್ರಾಯ ವಾಗಿದೆ. ಹಗಲು–ಇರುಳು ವಂಚಕರು ಪರಿಮಳಯುಕ್ತ ಗಂಧ ವನ್ನು ಅನ್ಯ ಬಗೆಯಲ್ಲಿ ಕದ್ದೊಯ್ಯಲು ಕಾಯುತ್ತಿರುತ್ತಾರೆ. ಮನುಷ್ಯನಲ್ಲಿ ಆಸೆ, ಬಡತನ, ನಿರುದ್ಯೋಗ ಇರುವವರೆಗೂ ಗಂಧದ ಕಳ್ಳತನ ಮತ್ತು ಮಾರಾಟ ನಡೆಯುತ್ತಲೇ ಇರುತ್ತದೆ. ಇದನ್ನು ನಿರ್ಮೂಲನ ಮಾಡಲು ಅಸಾಧ್ಯವೆನಿಸಿದೆ. ಆಸೆಬುರುಕ ಶ್ರೀಮಂತರ ಪ್ರಲೋಭಕ್ಕೆ ಒಳಗಾದ ನಿರುದ್ಯೋಗಿಗಳು ಜೀವದ ಹಂಗು ತೊರೆದು ನಿರ್ಜನ ಪ್ರದೇಶವಾದ ಕಾಡಿನಿಂದ ಜನನಿಬಿಡ ತೋಟ ಮತ್ತು ಜಮೀನುಗಳಿಂದ ಗಂಧವನ್ನು ಕದ್ದು ಒಯ್ಯು ತ್ತಾರೆ. ಅವರು ಕಾರು, ಜೀಪುಗಳಲ್ಲಿ ಇದನ್ನು ಹಂತಹಂತದಲ್ಲಿ ಸಾಗಿಸಿ ಗಡಿ ದಾಟುವಾಗ ತಲೆಯ ಹೊರೆಯ ಮೇಲೆ ಕೊಂಡೊ ಯ್ಯುವುದು ವಾಡಿಕೆ.

Sri Vidyabharathi Book Centre, Sringeri

CC-O. In Public Domain. Digitized by eGangotri



## ಸಾಗುವಾನಿ

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಿಂದಲೂ ಬಹುಮುಖ ಪ್ರಯೋಜನಕಾರಿಯಾದ ಸಾಗುವಾನಿ ಮರಕ್ಕೆ ಸರ ಕಾರದ ರಕ್ಷಣೆ ಸಿಕ್ಕಿದೆ. ಭಾರತಕ್ಕೆ ಬಂದ ಅರಬರು ಮತ್ತು ಆಫ್ರಿ ಕನ್ನರು ಅನಂತರ ಬಂದ ಬ್ರಿಟಿಷರು ಹಡಗುಗಳ ನಿರ್ಮಾಣಕ್ಕೆ ಸಾಗುವಾನಿ ಮರವನ್ನು ಉಪಯೋಗಿಸುತ್ತಿದ್ದರು. ಇಂಗ್ಲೆಂಡಿನ ಓಕ್ ಮರ ನಶಿಸುತ್ತಾ ಬಂದಂತೆಲ್ಲಾ ಸಾಗುವಾನಿ ಮರಕ್ಕೆ ಬೇಡಿಕೆ ಹೆಚ್ಚುತ್ತಾ ಬಂದಿತು. ಸಾಗುವಾನಿ ಕೆಚ್ಚು ಮರದ ಗರ್ಭದಲ್ಲಿ ಟಕ್ಟೋನಿಸ್ ಅಲೆಕೊಲಾಯ್ಡ ಇರುವುದರಿಂದ ಇದನ್ನು ಗೆದ್ದಲು ಹುಳು ಮುಟ್ಟುವುದಿಲ್ಲ. ಆದುದರಿಂದ ಈ ಮರ ಬಹಳ ಬಾಳಿಕೆ ಬರುತ್ತದೆ. ಈ ಮರವನ್ನು ಹಡಗಿನಿಂದ ಹಿಡಿದು ವಿಮಾನ ನಿರ್ಮಾಣದವರೆಗೂ ವಿವಿಧ ಕೆಲಸಗಳಿಗೆ ಉಪಯೋಗಿಸುತ್ತಿರು ವುದರಿಂದ ಇದರ ಉಪಯುಕ್ತತೆ ಎಷ್ಟೆಂಬುದನ್ನು ಊಹಿಸ ಬಹುದು. ಸುಮಾರು ಒಂದೂವರೆ ಮೀ. ದಪ್ಪ (ಸುತ್ತಳತೆ) ಬೆಳೆ ಯಲು ಸುಮಾರು 80 ವರ್ಷಗಳು ಬೇಕಾಗುತ್ತದೆ. ಸಾಗುವಾನಿ ಬೀಜಗಳು ಒರಟಾದ ಸಿಪ್ಪೆ ಹೊಂದಿರುವುದರಿಂದ ಅಷ್ಟು ಸುಲಭ ವಾಗಿ ಮೊಳಕೆ ಬರುವುದಿಲ್ಲ. ಬೀಜವನ್ನು ನೀರು ಹಾಕಿ ಒದ್ದೆ ಮಾಡಿ ಹರಡುವುದರಿಂದ ಮೇಲಿನ ಪದರವು ಒಡೆದು ಬೀಜವು ಮೊಳಕೆ ಬರಲು ಸಹಾಯಕವಾಗುತ್ತದೆ. ವರ್ಷದ ಮೇ, ಜೂನ್ ತಿಂಗಳುಗಳಲ್ಲಿ ಒಟ್ಟಲು ಪಾತಿಗಳಲ್ಲಿ ಬೀಜವನ್ನು ಹಾಕಿದರೆ ಮುಂದಿನ ವರ್ಷ ಮೇ–ಜೂನ್ ಸಮಯಕ್ಕೆ ಒಂದೂವರೆಯಿಂದ ಎರಡು ಅಡಿ ಎತ್ತರದ ಸಸಿಗಳು ಸಿಕ್ಕುತ್ತವೆ. ಈ ಸಸಿಗಳನ್ನು ಕತ್ತಿನಿಂದ ಮೇಲೆ ಇರುವ ಕಾಂಡವನ್ನು ಮತ್ತು ನೀರು ಬೇರು ಗಳನ್ನು ಕತ್ತರಿಸಿ 30 ಸೆಂ. ಮೀ. ಉದ್ದದ ಹೆಬ್ಬೆರಳು ಗಾತ್ರದ ಗಡ್ಡೆಯನ್ನು ಮಾಡಿಟ್ಟರೆ ಗಡ್ಡೆಯಿಂದ ಹೊಸ ಬೆಳೆಯುತ್ತದೆ.

CC-O. Vidyaranya Trust Foundation Collection. Digitized by eGangotri

CC-O. In Public Domain. Digitized by eGangotri


ಸಾಗುವಾನಿ ತೋಪು ನೆಡುವ ಅರಣ್ಯ ಪ್ರದೇಶದಿಂದ ನಾಟಾ ಮತ್ತು ಕಟ್ಟಿಗೆಯನ್ನು ತೆಗೆದ ನಂತರ ಗಿಡಗಂಟಿ ಬಳ್ಳಿಗಳನ್ನು ಕಡಿದು ಅವೆಲ್ಲಕ್ಕೂ ಬೆಂಕಿ ಕೊಡಬೇಕು. ಬೆನ್ನಾಗಿ ಸುಟ್ಟ ಪ್ರದೇಶದಲ್ಲಿ ಸಾಗುವಾನಿ ಸಸಿ ಚೆನ್ನಾಗಿ ಬೆಳೆಯುತ್ತದೆ. ಮೊದಲನೇ ಮಳೆ ಬಿದ್ದ ತಕ್ಷಣ ಹಸಿ ಕಡ್ಡಿಯನ್ನು ಸಾಲುಗೂಡಿಸಿ ಹಾರೆಯಿಂದ ಮಾಡಿದ ಗುಳಿಗಳಲ್ಲಿ (2.2 ಮಿಾ. ಅಂತರಕ್ಕೆ) ಗೆಡ್ಡೆಯನ್ನು ನೆಟ್ಟು ಕತ್ತಿನವರೆಗೂ ಹೂಳಿ ನೆಡುತ್ತಾರೆ. ಮಣ್ಣಿನಲ್ಲಿರುವ ಶಾಖ ಮತ್ತು ತೇವವನ್ನು ಅನುಸರಿಸಿ ಸುಮಾರು 8–10 ದಿನಗಳಲ್ಲಿ ನೆಟ್ಟ ಬೊಡ್ಡಿಗಳು ಚಿಗುರೊಡೆಯುತ್ತವೆ. ನೆಟ್ಟ ಮೂರು ವರ್ಷಗಳ ವರೆಗೂ ಸಾಗುವಾನಿ ಗಿಡಗಳನ್ನು ಕಳೆ ಬಳ್ಳಿಗಳಿಂದ ದೂರವಿರಿಸ ಬೇಕು. ಪ್ರಾಣಿಗಳ ಕಾಲ್ತುಳಿತವನ್ನು ತಪ್ಪಿಸಬೇಕು. 2 ಮಿಾ. ಅಂತರಕ್ಕೆ ನೆಟ್ಟರೆ ಹೆಕ್ಟೇರು ಒಂದಕ್ಕೆ ಸುಮಾರು 3000 ಗಿಡಗಳು ಬೇಕಾಗುತ್ತವೆ. ನಾಲ್ಕು ವರ್ಷ ವಯಸ್ಸಿಗೆ ಬಂದಾಗ ಮತ್ತೊಮ್ಮೆ ಕೆಲಸಕ್ಕೆ ಬಾರದ ಗಿಡಗಂಟಿಗಳನ್ನು ಕಡಿದು ಸಾಗುವಾನಿ ಗಿಡಕ್ಕೆ ಸುತ್ತಿರುವ ಬಳ್ಳಿಗಳನ್ನು ಕಡಿದು ರೆಂಬೆಗಳನ್ನು ಸವರಿ ಸಾಗುವಾನಿ ಸಸಿ ನೇರವಾಗಿ ಬೆಳೆಯುವಂತೆ ಮಾಡಬೇಕು.

ಸಾಗುವಾನಿ ನೆಡುತೋಪುಗಳನ್ನು 6, 12, 20, 28, 38 ಮತ್ತು 50ನೇ ವರ್ಷಗಳಲ್ಲಿ ಸಂಖ್ಯೆಯನ್ನು ವಿರಳಮಾಡಿ ಗಿಡದಿಂದ ಗಿಡಕ್ಕೆ ಅಂತರವನ್ನು ಹೆಚ್ಚಿಸಿ ಅವುಗಳು ಸಮೃದ್ಧಿಯಾಗಿ ಬೆಳೆಯಲು ಅವಕಾಶ ಮಾಡಿಕೊಡಬೇಕು. ನೆಡುತೋಪಿನಲ್ಲಿ ಇರುವ ಗಿಡಗಳ ಸಂಖ್ಯೆ ಮತ್ತು ಅವುಗಳ ಬೆಳವಣಿಗೆ, ಗಿಡಗಳಿಗೆ ಪ್ರಾಣಿಗಳಿಂದಾಗುವ ಅನಾಹುತಗಳನ್ನು ಅನುಸರಿಸಿ ಈ ಸಂಖ್ಯಾ ವಿರಳವನ್ನು ಮಾರ್ಪಾಡು ಮಾಡಬಹುದು. ಹೀಗೆ ತೆಳುವು ಮಾಡುವುದರಿಂದ ತೆಗೆದ ಕಂಬಗಳಿಗೆ ಅತ್ಯಧಿಕ ಬೇಡಿಕೆಯಿಂದ ಸರ್ಕಾರಕ್ಕೆ ಒಳ್ಳೆಯ ಆದಾಯ ಕೂಡ ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ನಾಗರಹೊಳೆ ಮತ್ತು ಕಾಕನಕೋಟೆ ಪ್ರದೇಶದಲ್ಲಿ ಸುಮಾರು 13,000 ಹೆಕ್ಟೇರ್ ಸಾಗುವಾನಿ ನೆಡುತೋಪು ಸಮೃದ್ಧಿಯಾಗಿ ಬೆಳೆದು ನಿಂತಿವೆ. ಇವು ರಾಜ್ಯದ ಮತ್ತು ದೇಶದ ಹೆಮ್ಮೆಯ ಸಂಪತ್ತಾಗಿದೆ.

## ಬೀಟೆಮರ

ಬ್ರಿಟಿಷರ ಆಧಿಪತ್ಯದ ಕಾಲದಲ್ಲಿ ಭಾರತದ ಕಪ್ಪು ಮರ, ಭಾರತದ ಗುಲಾಬಿ ಮರ ಎಂದೆಲ್ಲಾ ಈ ಮರವನ್ನು ಕರೆಯ ಲಾಗುತ್ತಿತ್ತು. ಇಂದಿಗೂ ನಮ್ಮ ದೇಶದಿಂದ ಬೇರೆ ದೇಶಗಳಿಗೆ ರಫ್ತು ಮಾಡುತ್ತಿರುವ ಮರಗಳಲ್ಲಿ ಬೀಟೆ ಮರವು ಒಂದಾಗಿದೆ. ಮೈಸೂರು ಸಂಸ್ಥಾನದಲ್ಲಿ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕ ಮಗಳೂರು, ಹಾಸನ, ಕೊಡಗು ಮತ್ತು ಮೈಸೂರು ಜಿಲ್ಲೆಗಳ ಕೆಲವು ಅರಣ್ಯ ಪ್ರದೇಶಗಳಲ್ಲಿ ಈ ಮರ ಹೆಚ್ಚಾಗಿ ಬೆಳೆಯುತ್ತದೆ.

ಈ ಮರ ಪೆಪಿಲಿಯೋನೇಸಿ ಕುಟುಂಬಕ್ಕೆ ಸೇರಿದೆ. ಸಮುದ್ರ ಮಟ್ಟಕ್ಕೆ 2500 ಅಡಿಗಳಿಂದ 4000 ಅಡಿಗಳವರೆಗಿನ ಪ್ರದೇಶ ಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ. ಒಮ್ಮೊಮ್ಮೆ 100 ಅಡಿಗಳಷ್ಟು ಎತ್ತರಕ್ಕೆ ಬೆಳೆದಿರುವ ಆಧಾರಗಳೂ ಉಂಟು. ಈ ಮರದ ಎಲೆಗಳಿಗೆ ಮಧ್ಯೆ ಕಡ್ಡಿಯೊಂದಿದ್ದು, ಅದರ ಎರಡು ಕಡೆಯೂ 5 ರಿಂದ 7 ಬಿಡಿ ಎಲೆಗಳಿರುತ್ತವೆ. ಹೂಗಳು ಬೆಳ್ಳ ಗಿದ್ದು ಹೊಂಗೆ ಮರದ ಹೂಗಳಂತಿರುತ್ತವೆ. ಚಪ್ಪಟೆಯಾದ ಕಾಯಿಯಲ್ಲಿ 1 ರಿಂದ 3 ಬೀಜಗಳಿರುತ್ತವೆ. ಈ ಮರ ಸಾಮಾನ್ಯ ವಾಗಿ ಬೇಸಿಗೆಯಲ್ಲಿ ಹೂ ಬಿಡುತ್ತದೆ.

ಸ್ವೀಡಿಷ್ ಸಸ್ಯ ಶಾಸ್ತ್ರಜ್ಞ ಎನ್. ಡಾಲ್ಬರ್ಗ್‌ರವರಿಂದ ಈ ಮರಕ್ಕೆ ಡಾಲ್ಬರ್ಜಿಯಾ ಎಂಬ ಹೆಸರು ಬಂದಿದೆ. ಲ್ಯಾಟಿಫೋ ಲಿಯಾ ಎಂಬುದು ಅಗಲವಾದ ಎಲೆಗಳಿವೆ ಎಂಬುದನ್ನು ಸೂಚಿಸು ತ್ತದೆ. ಬೀಜಗಳನ್ನು ನೆಟ್ಟು ಮೊದಲು ಸಸಿಗಳನ್ನು ಪಡೆದು

Sri Vidyabharathi Book Centre, Shringeri

CC-O. In Public Domain. Digitized by eGangotri


ಅನಂತರ ಈ ಸಸಿಗಳನ್ನು ಅನುಕೂಲ ವಾತಾವರಣವಿರುವ ಕಡೆ ನೆಡುತ್ತಾರೆ.

ಇದರ ಒಳಮರ ಕೆಂಪು ಮಿಶ್ರಿತ ಕಪ್ಪು ಬಣ್ಣಕ್ಕಿದ್ದು ಗಟ್ಟಿಯಾಗಿರುತ್ತವೆ. 1 ಘನ ಅಡಿಗೆ 55 ರಿಂದ 60 ಪೌಂಡು ತೂಕ ಬರುತ್ತದೆ. ಹತ್ತಿರದ ಎಳೆಗಳನ್ನು ಹೊಂದಿರುವ ಈ ಕಪ್ಪು ಮರಕ್ಕೆ ಚೆನ್ನಾಗಿ ಪಾಲಿಷ್ ತೆಗೆದುಕೊಳ್ಳುವ ಗುಣವಿದೆ.

ಈ ಮರ ನಮ್ಮ ದೇಶದ ಅತ್ಯಂತ ಬೆಲೆ ಬಾಳುವ ಮರಗಳಲ್ಲೊಂದು ಎಂದು ಹೇಳಿದರೆ ತಪ್ಪಾಗಲಾರದು. ಇತ್ತೀಚಿನ ಒಂದು ಘಟನೆಯನ್ನೇ ಹೇಳುವುದಾದರೆ ಬೀಟೆ ಮರದ 63.7 ಘನ ಅಡಿ ಇರುವ ದಿಮ್ಮಿಯೊಂದನ್ನು 23,059,40 ರೂಪಾಯಿಗಳಿಗೆ ಮಾರಲಾಯಿತು. ಈ ಲೆಕ್ಕಾಚಾರದ ಪ್ರಕಾರ 1 ಘನ ಅಡಿಗೆ 362 ರೂಪಾಯಿಗಳಾಗುತ್ತವೆ. ಮನೆಯ ದಿನಬಳಕೆಯ ಕುರ್ಚಿ, ಮೇಜುಗಳು, ಮಂಚಗಳು, ಪೆಟ್ಟಿಗೆಗಳು ಇವೆಲ್ಲವನ್ನೂ ಮಾಡಲು ಬೀಟೆ ಮರವನ್ನು ಉಪಯೋಗಿಸುವುದರಿಂದ ಈ ಮರಕ್ಕೆ ಬಹಳ ಬೇಡಿಕೆ ಇದೆ.

## ವಿಹಾರಸ್ಥಳ

ನಾಗರಹೊಳೆ ಅಭಯಾರಣ್ಯದಲ್ಲಿ ವನ್ಯಪ್ರಾಣಿಗಳು ನಿರ್ಭೀತ ಜೀವನ ನಡೆಸಲು ಅಗತ್ಯ ವಾತಾವರಣ ಹಾಗೂ ಆಹಾರ ಸೇವನೆಗೆ ಅವಶ್ಯವಾದ ವಸ್ತುಗಳು ದೊರೆಯುವುದರಿಂದ, ಅವುಗಳ ಸಂರಕ್ಷಣೆಗೆ ಯಾವ ಕೊರತೆಯೂ ಇಲ್ಲ.

ಈಚಿನ ದಿನಗಳಲ್ಲಿ ನಾಗರಹೊಳೆ ಅಭಯಾರಣ್ಯ ದೇಶೀಯ ಹಾಗೂ ವಿದೇಶೀಯ ಪ್ರವಾಸಿಗರಿಗೆ ಅಚ್ಚುಮೆಚ್ಚಿನ ಪ್ರವಾಸಿ ಸ್ಥಳವಾಗಿ ಅಭಿವೃದ್ಧಿ ಹೊಂದುತ್ತಲಿದೆ. ಮೈಸೂರು ಹಾಗೂ ಮಡಿಕೇರಿಗಳಿಂದ ಈ ಸ್ಥಳವನ್ನು ತಲುಪಲು ಉತ್ತಮ ಸಾರಿಗೆ ವ್ಯವಸ್ಥೆಯಾಗಿದೆ. ಅದೇ ದಿವಸ ಸ್ಥಳಕ್ಕೆ ಭೇಟಿ ನೀಡಿ

CC-O. Vidyabharathi Book Centre, Sringeri

CC-O. In Public Domain. Digitized by eGangotri


ಇಲ್ಲಿನ ಅಭಯಾರಣ್ಯದ ನಿಸರ್ಗ ಹಾಗೂ ವನ್ಯಪ್ರಾಣಿ ಸಂಪತ್ತನ್ನು ವೀಕ್ಷಿಸಿ ಹಿಂದಿರುಗಬಹುದಾಗಿದೆ. ಒಂದೆರಡು ದಿನಗಳಿಂದ ವಾರದ ವರೆಗೆ ಅಲ್ಲಿಯೇ ಉಳಿದು, ನಿಸರ್ಗದ ರಮಣೀಯತೆ ಹಾಗೂ ವನ್ಯಪ್ರಾಣಿಗಳ ರುದ್ರಗಂಭೀರ ಚಟುವಟಿಕೆಗಳನ್ನು ವೀಕ್ಷಿಸಬಯಸುವ ಪ್ರವಾಸಿಗರಿಗೆ ತಂಗಲು, ನಾಗರಹೊಳೆಯಲ್ಲಿ 'ಕಾವೇರಿ' ಮತ್ತು 'ಗಂಗೋತ್ರಿ' ಎಂಬ ಉತ್ತಮ ವಸತಿಗೃಹಗಳಿರುವುವಲ್ಲದೆ, ಶಾಲಾಕಾಲೇಜುಗಳಿಂದ ಹಾಗೂ ತಂಡಗಳಲ್ಲಿ ಬರುವ ಪ್ರವಾಸಿಗರಿಗಾಗಿಯೇ 20 ಹಾಸಿಗೆಗಳ ಸೌಲಭ್ಯವಿರುವ 'ಡಾರ್ಮಿಟರಿ' ವಸತಿಗೃಹವಿದೆ. ಇದಲ್ಲದೆ, ನಾಗರಹೊಳೆಗೆ ಹತ್ತಿರವಿರುವ ಮೂರ್ಕಲಿನಲ್ಲಿ ಅರಣ್ಯ ಇಲಾಖೆಗೆ ಸೇರಿದ ವಸತಿಗೃಹವಿದೆ. ನಾಗರಹೊಳೆಯ ವಸತಿಗೃಹದಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿ ಊಟ ಫಲಾಹಾರಗಳ ತಯಾರಿಕೆ, ಸರಬರಾಜಿನ ವ್ಯವಸ್ಥೆ ಇದೆ. ನಾಗರಹೊಳೆಯಲ್ಲಿ ತಂಗಲಿಚ್ಛಿಸುವ ಪ್ರವಾಸಿಗರು ಮುಂಗಡವಾಗಿ ಅಭಯಾರಣ್ಯದ ವಲಯ ಅರಣ್ಯಾಧಿಕಾರಿಗಳಿಗೆ ಬರೆದು ತಿಳಿಸಿ ಊಟ ವಸತಿಗಳಿಗೆ ಅನುಕೂಲ ಮಾಡಿಕೊಳ್ಳಬಹುದಾಗಿದೆ. ಕುಟ್ಟ, ನಾಗರಹೊಳೆಗೆ ಸಮೀಪದಲ್ಲಿನ ಚಿಕ್ಕ ವ್ಯಾಪಾರ ಸ್ಥಳ. ಊಟ ತಿಂಡಿಗಳ ತಯಾರಿಕೆಗೆ ವಸ್ತುಗಳನ್ನು ಇಲ್ಲಿಂದ ಕೊಂಡೊಯ್ಯಬೇಕಾಗುವುದರಿಂದ, ಪ್ರವಾಸಿಗರು ಮುಂಗಡವಾಗಿ ಬರೆದುಕೊಳ್ಳುವುದು ಅಗತ್ಯವಿದೆ.

ವಸತಿಗೃಹಗಳಲ್ಲಿ ಸ್ಥಳಾವಕಾಶ ಕೋರುವವರು ನಾಗರಹೊಳೆಯ ರೇಂಜ್ ಫಾರೆಸ್ಟ್ ಅಧಿಕಾರಿಗಾಗಲೀ ಮೈಸೂರಿನಲ್ಲಿರುವ ವನ್ಯಮೃಗ ಉಪ ವಿಭಾಗದ ಅಸಿಸ್ಟೆಂಟ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಅವರಿಗಾಗಲೀ ಅಥವಾ ಬೆಂಗಳೂರಿನಲ್ಲಿಯ ವನ್ಯಮೃಗ ವಿಭಾಗದ ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಅವರಿಗಾಗಲೀ ಬರೆದುಕೊಳ್ಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri



ಬೇಸಿಗೆ ಮತ್ತು ತರ ರಜಾದಿನಗಳಲ್ಲಿ ಅಭಯಾರಣ್ಯ ನೋಡಲು ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಬರುವುದರಿಂದ, ಒಂದು ಅಥವಾ ಎರಡು ತಿಂಗಳುಗಳ ಮೊದಲೇ ತಂಗಲು ಸ್ಥಳಾವಕಾಶಗಳನ್ನು ಮಾಡಿಕೊಳ್ಳುವುದು ಉತ್ತಮ.

ವನ್ಯಪ್ರಾಣಿಗಳ ವೀಕ್ಷಣೆಗೆ ಸಾಮಾನ್ಯವಾಗಿ ಪ್ರತಿದಿನ ಬೆಳಗಿನ 6 ಘಂಟೆಯಿಂದ 10 ಘಂಟೆ ಮತ್ತು ಸಂಜೆ 5 ಘಂಟೆಯಿಂದ 6–30 ಘಂಟೆಯವರೆಗೆ ಪ್ರಶಸ್ತ ಸಮಯ. ವನ್ಯಪ್ರಾಣಿಗಳ ಶಾಂತತೆಯನ್ನು ಕಾಪಾಡುವ ಸಲುವಾಗಿ ಅಭಯಾರಣ್ಯದ ಪ್ರದೇಶದಲ್ಲಿ ಸಂಜೆ 6–30 ರಿಂದ ಬೆಳಗಿನ 6 ಘಂಟೆಯವರೆಗೆ ವಾಹನಗಳ ಓಡಾಟವನ್ನು ನಿಷೇಧಿಸಲಾಗಿದೆ.

ಪ್ರವಾಸಿಗರ ಅನುಕೂಲಕ್ಕಾಗಿ ಅಭಯಾರಣ್ಯದ ವೀಕ್ಷಣೆಗಾಗಿ ಎರಡು ವ್ಯಾನುಗಳನ್ನು ಅರಣ್ಯ ಇಲಾಖೆ ಹೊಂದಿದೆ. ಪ್ರತಿಯೊಂದು ವ್ಯಾನಿನಲ್ಲಿ ಹತ್ತು ಪ್ರವಾಸಿಗರನ್ನು ವೀಕ್ಷಣೆಗೆ ಕೊಂಡೊಯ್ಯಬಹುದಾಗಿದೆ. ಎರಡನೇ ಶನಿವಾರ ಮತ್ತು ಪ್ರತಿ ಭಾನುವಾರಗಳಂದು ಪ್ರವಾಸಿಗರು ಜಾಸ್ತಿಯಿದ್ದಾಗ, ಪ್ರವಾಸಿಗರು ತಂದ ವಾಹನಗಳಲ್ಲೇ ಅಭಯಾರಣ್ಯದ ನಿಗದಿತ ಮಾರ್ಗಗಳಲ್ಲಿ ಅರಣ್ಯ ಮಾರ್ಗದರ್ಶಿಯೊಬ್ಬರ ಸಹಾಯದೊಡನೆ ವೀಕ್ಷಿಸುವ ಸೌಲಭ್ಯಗಳೂ ಇವೆ. ಅರಣ್ಯ ಇಲಾಖಾ ವಾಹನಗಳ ಜೊತೆಗೆ ಅರಣ್ಯ ಪ್ರದೇಶಗಳಲ್ಲಿ ವಿರಾಮವಾಗಿ ಸುತ್ತಿ ವನಸಿರಿಯನ್ನು ವೀಕ್ಷಿಸುವ ಸಲುವಾಗಿ ಎರಡು ಸವಾರಿ ಆನೆಗಳನ್ನು ಅರಣ್ಯ ಇಲಾಖೆ ಹೊಂದಿದೆ. ಒಂದು ಆನೆಯ ಮೇಲೆ ಒಟ್ಟಿಗೆ ಒಮ್ಮೆ ನಾಲ್ಕು ಜನರು ಕೂರಲು ಅವಕಾಶವಿದೆ.

ಅಭಯಾರಣ್ಯ ವೀಕ್ಷಣೆಗೆ ಹೊರಟಾಗ ಪ್ರವಾಸಿಗರು ಅನುಸರಿಸಲೇಬೇಕಾದ ಕೆಲವು ನಿಯಮಗಳಿವೆ. ಇವುಗಳಲ್ಲಿ ಮುಖ್ಯವಾದುದು, ಅರಣ್ಯಕ್ಕೆ ಹೋಗುವಾಗ ಖಾಕಿ ಅಥವಾ ಹಸಿರು

Sri Vidyabharathi Book Centre, Sringeri

CC-O. In Public Domain. Digitized by eGangotri



ಆನೆ ಸವಾರಿ

ಬಣ್ಣದ ಬಟ್ಟೆ ಹಾಕಿರುವುದು ಉತ್ತಮ. ಇದಕ್ಕೆ ಮುಖ್ಯ ಕಾರಣ ಹಸಿರು ಬಣ್ಣದೊಡನೆ ಇದು ಮಿಲನವಾಗುವುದರಿಂದ ಪ್ರಾಣಿಗಳು ಮನುಷ್ಯರ ಓಡಾಟದಿಂದ ಬೆಚ್ಚದೆ ನಿರಾತಂಕವಾಗಿ ತಿರುಗಾಡಲು ನೆರವಾಗುತ್ತದೆ. ಈ ಬಟ್ಟೆಗಳು ಇಲ್ಲದಿದ್ದರೆ, ಬೇರಾವುದೇ ಮಂದಬಣ್ಣದ ಬಟ್ಟೆಗಳು ಅವಶ್ಯಕ. ಕೆಂಪು ಅಥವಾ ಬಿಳಿ ಬಟ್ಟೆಗಳನ್ನು ಖಂಡಿತ ಧರಿಸಬಾರದು. ಈ ಬಣ್ಣದ ಬಟ್ಟೆಗಳು ವನ್ಯಮೃಗಗಳ ಕಣ್ಣಿಗೆ ನೇರವಾಗಿ ಬೀಳುವುದರಿಂದ, ಅವುಗಳು ಪ್ರವಾಸಿಗರಿರುವ ಹತ್ತಿರದ ಸ್ಥಳದಿಂದ ದೂರ ಸರಿದು ಹೋಗುತ್ತವೆ. ಇದರಿಂದ ಕೆಲವೊಮ್ಮೆ ವನ್ಯಮೃಗಗಳ ದರ್ಶನ ದೊರೆಯದೇ ಹೋಗುತ್ತದೆ. ವಾಹನದಲ್ಲಿ ಪ್ರಯಾಣಿಸುವ ಪ್ರವಾಸಿಗರು ವಾಹನದ ಶಬ್ದ ಸಾಧ್ಯವಾದಷ್ಟು ಕಡಿಮೆ ಇರುವಂತೆ ಸಾಗಿಸಬೇಕು. ವಾಹನದಿಂದ ಯಾವ ಕಾರಣಕ್ಕೂ ಎಲ್ಲಿಯೂ ಇಳಿಯಬಾರದು. ಕೆಳಕ್ಕಿಳಿದ ವೇಳೆಯಲ್ಲಿ ಹಾವಿನಿಂದ ಆನೆಯವರೆಗಿನ ವಿವಿಧ ವನ್ಯಪ್ರಾಣಿಗಳ ಪ್ರಕೋಪಕ್ಕೆ ಒಳಗಾಗುವ ಸಾಧ್ಯತೆಯಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri


ಪ್ರಾಣಿಗಳ ಕಣ್ಣು ಹಾಗೂ ಕಿವಿಗಳು ಬಹು ಚುರುಕಾಗಿರುವುದರಿಂದ, ಪ್ರವಾಸಿಗರು ವೀಕ್ಷಣೆ ಕಾಲದಲ್ಲಿ ಸಂಪೂರ್ಣ ನಿಶ್ಶಬ್ದ ಆಚರಿಸುವುದು ಅಗತ್ಯ. ಈ ನಿಯಮಗಳನ್ನು ಪಾಲಿಸಿಕೊಂಡು ಬಂದರೆ, ವನ್ಯಮೃಗಗಳ ದರ್ಶನ ಸರಾಗವಾಗಿ ದೊರೆಯುವುದಲ್ಲದೆ, ಅವುಗಳ ನಿರ್ಭೀತ ಜೀವನ ನೋಡುವ ಅಪೂರ್ವ ಅವಕಾಶ ಪ್ರತಿಯೊಬ್ಬ ಪ್ರವಾಸಿಗನದಾಗಬಹುದು.

ನಾಗರಹೊಳೆ ಅಭಯಾರಣ್ಯವನ್ನು ವೀಕ್ಷಿಸಲು ಬೇಸಿಗೆ ಕಾಲ ಅತ್ಯುತ್ತಮ. ಜೂನ್ 15 ರಿಂದ ನವೆಂಬರ್ 15 ರವರೆಗೆ ಮಳೆಗಾಲವಿರುವುದರಿಂದ ಪ್ರಾಣಿಗಳ ದರ್ಶನ ಸಾಧ್ಯವಾಗುವುದಿಲ್ಲ. ಆಲ್ಲದೆ ಅನಾನುಕೂಲ ಸಮಯ.

ಫೆಬ್ರವರಿ, ಮಾರ್ಚ್ ತಿಂಗಳುಗಳಲ್ಲಿ ನಾಗರಹೊಳೆ ಅಭಯಾರಣ್ಯದ ಸುತ್ತಮುತ್ತ ಕಾಫಿ ಗಿಡಗಳಿಗೆ ತುಂತುರು ಮಳೆಯಾಗಿ, ಗಿಡಗಳಲ್ಲಿ ಬಿಳಿ ಪುಷ್ಪಗಳು ಅರಳಿ ನಿಂತು ಕಂಪು ಸೂಸಿದಾಗ ನಾಗರಹೊಳೆ ವೀಕ್ಷಿಸಲು ಅತಿ ರಮ್ಯವೆನಿಸುತ್ತದೆ.

ಅಭಯಾರಣ್ಯದಲ್ಲಿ ಗಿಡಮರಗಳ ಎಲೆಗಳು ಉದುರಿ ಅರಣ್ಯದ ಎಲ್ಲೆಡೆ ಮರಗಿಡಗಳ ಸಂದಿನಿಂದ ಸೂರ್ಯ ರಶ್ಮಿ ತೂರಿಬಿದ್ದು ನೋಡಲು ಆಕರ್ಷಕವಾಗಿರುತ್ತದೆ. ವನ್ಯಪ್ರಾಣಿಗಳನ್ನು ಸುಲಭವಾಗಿ ಗುರುತಿಸಲೂ ಇದು ಸಹಕಾರಿಯಾಗುತ್ತದೆ. ಹೊಸ ಚಿಗುರು ಹುಲ್ಲು ಬೆಳೆದು ಅದನ್ನು ತಿನ್ನಲು ಉಲ್ಲಾಸದಿಂದ ನೆಗೆದಾಡಿ ಬರುವ ಪ್ರಾಣಿಗಳ ಓಡಾಟ ಮನಸ್ಸಿಗೆ ಹರ್ಷ ತರುವುದು. ಪ್ರಾಣಿಗಳನ್ನು ನಿಜ ಜೀವನದಲ್ಲಿ ಮೊಟ್ಟಮೊದಲನೆಯ ಬಾರಿ ಕಾಣುವ ಪ್ರವಾಸಿಗ ನಿಜಕ್ಕೂ ಧನ್ಯನೆನಿಸುವನು.

CC-O. In Public Domain. Digitized by eGangotri


# ಅರಣ್ಯ ಸಂರಕ್ಷಣೆ ಒಂದು ಕರ್ತವ್ಯ

ವನ್ಯಮೃಗಗಳು ಹಾಗೂ ಅರಣ್ಯಗಳನ್ನು ಸಂರಕ್ಷಿಸುವಲ್ಲಿ ಮಾನವ ಆದ್ಯತೆಯ ಆಸಕ್ತಿ ವಹಿಸಿದರೆ, ತನ್ನನ್ನು ತಾನು ಕಾಪಾಡಿಕೊಂಡಂತೆ. ಅಭಯಾರಣ್ಯಗಳು ಮತ್ತು ಅರಣ್ಯಗಳಿರುವುದು ಮಾನವ ಕಲ್ಯಾಣಕ್ಕಾಗಿ, ಎಂಬುದನ್ನು ಸರ್ವರೂ ಅರಿಯಬೇಕು.

ಆಧುನಿಕತೆ ಮತ್ತು ಯಾಂತ್ರೀಕರಣ ಮಾನವನ ಬಾಳಿನಲ್ಲಿ ಹೆಚ್ಚಾದಂತೆ, ಆತ ತನ್ನ ಮನೋಲ್ಲಾಸ ಮತ್ತು ಏಕಾಂತತೆಗಳಿಗಾಗಿ, ನಿಸರ್ಗದತ್ತ ಹಾಗೂ ಏಕಾಂತತೆಯ ಆಗರವೆನಿಸಿದ ಅರಣ್ಯಗಳತ್ತ ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದು ಒಂದು ಶುಭಚಿಹ್ನೆ ಎನ್ನಬಹುದು. ಈ ದಿಸೆಯಲ್ಲಿ ನಾಗರಹೊಳೆ ಅಭಯಾರಣ್ಯ ಅತಿ ಜನಪ್ರಿಯ ಪ್ರೇಕ್ಷಣೀಯ ಸ್ಥಳವಾಗಿ ಜನತೆಯನ್ನು ಆಕರ್ಷಿಸುತ್ತಿದೆ. ಇಲ್ಲಿನ ಮನಮೋಹಕ ಪ್ರಕೃತಿ ಸೌಂದರ್ಯ, ಪ್ರಕೃತಿಯ ಮಡಿಲಲ್ಲಿನ ವಿವಿಧ ವನ್ಯಪ್ರಾಣಿಗಳನ್ನು ಕಂಡಾಗ ಪ್ರಕೃತಿ ಪ್ರಾಣಿಗಳ ಸಮನ್ವಯದ ಮಹತ್ವ ನಮಗೆ ಅರಿವಾಗುತ್ತದೆ. ಆಗ ವನ್ಯ ಸಂಪತ್ತನ್ನೂ ವನ್ಯಮೃಗಗಳನ್ನೂ ಕಾಪಾಡುವುದು ನಮ್ಮೆಲ್ಲರ ಕರ್ತವ್ಯವೆಂಬುದನ್ನು ಮನಗಾಣುತ್ತೇವೆ.